
ಸಮತೆಯ ಸಾಕಾರ ಮೂರ್ತಿ
ರಮಣ ಮಹರ್ಷಿ



ಡಿ.ಎಸ್. ನಾಗಭೂಷಣ

ಸಮತೆಯ ಸಾಕಾರ ಮೂರ್ತಿ
ರಮಣ ಮಹರ್ಷಿ

ಡಿ.ಎಸ್. ನಾಗಭೂಷಣ

ಗಾಂಧಿಗಿರಿ ಪ್ರಕಾಶನ
ಶಿವಮೊಗ್ಗ

Samateya Saakara Murthy Sri Ramana Maharshi : An introduction to Sri Rmana Maharshi's life and teachings in Kannada by D.S. Nagabhushana

Published by:
Gandhigiri Prakashana
HIG-5, HIG-5, 'Nudi,
Kallahally Extension,
Vinoba Nagara,
Shivamogga-577 204 (Karnataka)
Ph: 08282-248574

Pages: 40
Price: Rs.30/-
Paper used: 70GSM NS Maplitho
Copy right: Savitha Nagabhushana
Photo courtesey:*www.sriramanamahrshi.org*

Printed at:
Chitrkoota Printers
Durgigudi, Shivamogga

ಸಮತೆಯ ಸಾಕಾರಮೂರ್ತಿ: ರಮಣ ಮಹರ್ಷಿ
ಲೇ: ಡಿ.ಎಸ್.ನಾಗಭೂಷಣ

ಪ್ರಕಾಶನ:
ಗಾಂಧಿಗಿರಿ ಪ್ರಕಾಶನ
ಎಚ್.ಐ.ಜಿ.-೫, 'ನುಡಿ', ಕಲ್ಲಹಳ್ಳಿ ಬಡಾವಣೆ
ವಿನೋಬ ನಗರ, ಶಿವಮೊಗ್ಗ-೫೭೭ ೨೦೪
ದೂರವಾಣಿ: ೦೮೨೮೨-೨೪೮೫೭೪

ಪುಟಗಳು: ೪೦
ಬೆಲೆ: ರೂ.೩೦/-
ಹಕ್ಕುಗಳು: ಸವಿತಾ ನಾಗಭೂಷಣ
ಚಿತ್ರಗಳ ಕೃಪೆ: *ಶ್ರೀ ರಮಣಾಶ್ರಮ ಜಾಲತಾಣ*

ಮುದ್ರಣ:
ಚಿತ್ರಕೂಟ ಪ್ರಿಂಟರ್ಸ್
ದುರ್ಗಿಗುಡಿ, ಶಿವಮೊಗ್ಗ

ಲೇಖಕನ ಮಾತು

ನಾನು ಯಾರು? ನಿಜವಾಗಿ ನಾನು ಏನು? ನಾನು ಎಲ್ಲಿಂದ ಬಂದೆ? ಏಕಾಗಿ ಬಂದಿರುವೆ? ಎಲ್ಲಿಗೆ ಹೋಗುವೆ? ಈ ಬದುಕಿಗೆ ಅರ್ಥ, ಉದ್ದೇಶ, ಸಾರ್ಥಕತೆಗಳೆಂಬುವೇನಾದರೂ ಇದೆಯೇ? ಅಥವಾ ಇದೆಲ್ಲ ಕೇವಲ ಆಕಸ್ಮಿಕವೇ? ಆಕಸ್ಮಿಕವಾದರೂ ಏಕೆ? ಇದೆಲ್ಲ ಏಕೆ ನಡೆಯುತ್ತಿದೆ? ಯಾರಾದರೂ ನಡೆಸುವವರಿದ್ದಾರಾ? ಇತ್ಯಾದಿ ಪ್ರಶ್ನೆಗಳು ಹಲವು ಬಾರಿ ಹಲವರಂತೆ ನನ್ನನ್ನೂ ಕಾಡಿವೆ. ಈ ಬಗ್ಗೆ ನನ್ನ ಯೋಗ್ಯತಾನುಸಾರ ದೊರೆತ ಹಲವು ಹಿರಿಯರ ಮತ್ತು ವಿದ್ವಾಂಸರ ಬಳಿ ಚರ್ಚಿಸಿ, ಹಲವು ಪುಸ್ತಕಗಳನ್ನು ಓದಿ, ಕೆಲವು ಬಾರಿ ಇವುಗಳಲ್ಲಿ ಕೆಲವು ಪ್ರಶ್ನೆಗಳಿಗೆ ಉತ್ತರಗಳ ಹೊಳಹುಗಳನ್ನೂ ಪಡೆದಿರುವೆ. ಆದರೆ ಈ ಎಲ್ಲ ಪ್ರಶ್ನೆಗಳಿಗೆ ಒಟ್ಟಾರೆಯಾಗಿ ನನಗೆ ಒಪ್ಪಿತವೆನಿಸುವ ಪರಿಭಾಷೆಯಲ್ಲಿ ಪರಿಪೂರ್ಣತೆಗೆ ಹತ್ತಿರವೆನಿಸುವ ಉತ್ತರಗಳು ದೊರೆತದ್ದು ನಾನು ರಮಣರನ್ನು ಓದಿದಾಗ.


ನಿಜ, ಓದು ಅನುಭವವಲ್ಲ. ಆದರೆ ನಮ್ಮ ಅನುಭವಗಳಿಗೆ ಈ ಓದು ಹೊಸ ಬೆಳಕೊಂದನ್ನು ಒದಗಿಸಿ ಹೊಸ ಒಳನೋಟಗಳನ್ನು ಸಾಧ್ಯವಾಗಿಸುತ್ತದೆ. ರಮಣಾಶ್ರಮದ ನನ್ನ ಹಲವು ಭೇಟಿಗಳೂ ಇದಕ್ಕೆ ಪೂರಕ ಶಕ್ತಿಯನ್ನು ಒದಗಿಸಿವೆ. ಹೀಗಾಗಿ ಶ್ರೀ ರಮಣ ಮಹರ್ಷಿಗಳೊಡನೆಯ ನನ್ನ ಈ ಮುಖಾಮುಖಿಯನ್ನು ಸಹಪಥಿಕರೊಂದಿಗೆ ಹಂಚಿಕೊಳ್ಳಬೇಕೆಂಬ ಈ ತುಡಿತ ನನ್ನಲ್ಲಿ ಉಂಟಾಗಿದೆ. ಇದಕ್ಕೆ ಇಂಬು ನೀಡಿದವರು, ಸಿದ್ಧಗಂಗೆ ಶ್ರೀಗಳ ಅಭಿನಂದನ ಗ್ರಂಥವೊಂದರ ಸಂಪಾದಕರಾಗಿ ರಾಷ್ಟ್ರಕವಿ ಡಾ॥ ಜಿ.ಎಸ್. ಶಿವರುದ್ರಪ್ಪನವರು ನನ್ನಿಂದ ಬರೆಸಿದ ಒಂದು ಲೇಖನವೇ ನೆಪವಾಗಿ, ಅದು ಅರಳಿ ಈ ಕಿರುಪುಸ್ತಕದ ರೂಪು ತಳೆದಿದೆ.

ಸಮಾಜವಾದಿ ಎಂದು ಕರೆದುಕೊಳ್ಳುವ ನಾನು ಪಾರಮಾರ್ಥಿಕವೆನ್ನಬಹುದಾದ ಇಂತಹ ಪುಸ್ತಕ ಬರೆಯುವುದು ವಿರೋಧಾಭಾಸವಲ್ಲವೇ? ಎಂದು ಕೆಲವರು ಕೇಳಬಹುದು. ಆದರೆ ಸಮಾಜವಾದವೆನ್ನುವುದು ಆತ್ಯಂತಿಕವಾಗಿ ಮನುಷ್ಯತ್ವದ ಸೃಜನಶೀಲ ಶೋಧನೆಯ ಒಂದು ಜ್ಞಾನಶಿಸ್ತು ಕೂಡಾ ಹೌದು ಎಂದು ತಿಳಿದವನು ನಾನು. ಹಾಗಾಗಿ ಈ ಪುಸ್ತಕವೂ. ಓದಿ ನಿಮಗೇನನ್ನಿಸಿತು, ತಿಳಿಸಿರಿ.

ಈ ಕಿರು ಪುಸ್ತಕವನ್ನು ಆಗುಮಾಡಿದ ಎಲ್ಲರಿಗೂ ನನ್ನ ಕೃತಜ್ಞತೆಗಳು.

೧೦.೧.೨೦೧೩ **ಡಿ.ಎಸ್. ನಾಗಭೂಷಣ**

ಶಿವಮೊಗ್ಗ



ಭಗವಾನ್ ಶ್ರೀ ರಮಣ ಮಹರ್ಷಿಗಳು

ಸಮತೆಯ ಸಾಕಾರ ಮೂರ್ತಿ: ರಮಣ ಮಹರ್ಷಿ

ಇಪ್ಪತ್ತನೇ ಶತಮಾನ ಕಂಡ ಸರ್ವಶ್ರೇಷ್ಠ ಸಂತ ಮಹಾಶಯರಲ್ಲಿ ರಮಣ ಮಹರ್ಷಿಗಳು ಅಗ್ರಗಣ್ಯರು. ಇದು ಈಗ ಜಗತ್ತಿನಾದ್ಯಂತ ಮಾನ್ಯ ಮಾಡಲ್ಪಟ್ಟಿರುವ ಸಂಗತಿಯಾಗಿದೆ. ಏಕೆಂದರೆ ರಮಣರಿಗೆ ಭಾರತದಲ್ಲಿ ಮಾತ್ರವಲ್ಲ, ಜಗತ್ತಿನ ಎಲ್ಲ ಭಾಗಗಳ, ಎಲ್ಲ ಧರ್ಮ, ಜನಾಂಗ, ಭಾಷೆಗಳ ಶಿಷ್ಯರಿದ್ದಾರೆ. ಸ್ವತಃ ರಮಣರು ಎಂದೂ ತಮ್ಮನ್ನು ಗುರುವೆಂದಾಗಲೀ, ತಮ್ಮ ಬಳಿ ಶ್ರದ್ಧೆಯಿಂದ ಬಂದ ಯಾರನ್ನೇ ಆಗಲೀ ಶಿಷ್ಯರೆಂದಾಗಲೀ ಪರಿಗಣಿಸಲಿಲ್ಲ. ಆದರೂ, ತಮ್ಮನ್ನು ರಮಣರ ಶಿಷ್ಯರೆಂದು ಕರೆದುಕೊಳ್ಳುವ ಲಕ್ಷಾಂತರ ಜನ ಜಗತ್ತಿನಾದ್ಯಂತ ಇರುವರು. ಇವರು ಜಗತ್ತಿನ ಪೂರ್ವ-ಪಶ್ಚಿಮಗಳೆರಡೂ ಕಡೆ ತಮ್ಮದೇ ರೀತಿಯಲ್ಲಿ ರಮಣ ಕೇಂದ್ರಗಳನ್ನು ಸ್ಥಾಪಿಸಿಕೊಂಡಿದ್ದಾರೆ. ರಮಣರ ಸಂದೇಶ ಉಪದೇಶಗಳನ್ನು ಪ್ರಚುರಪಡಿಸುತ್ತಿದ್ದಾರೆ.

ತಮಿಳ್ನಾಡಿನ ತಿರುವಣ್ಣಾಮಲೈನಲ್ಲಿರುವ ರಮಣಾಶ್ರಮಕ್ಕೆ ವರ್ಷದಾದ್ಯಂತ ಭಾರತದ ಮತ್ತು ಜಗತ್ತಿನ ಬೇರೆ ಬೇರೆ ಭಾಗಗಳಿಂದ ಭಕ್ತರು ಬರುವರು. ಸುಮಾರು ೬೦ ವರ್ಷಗಳ ಹಿಂದೆಯೇ ರಮಣರು ದೇಹತ್ಯಾಗ ಮಾಡಿರುವರಾದರೂ, ಈ ಭಕ್ತ ಸಮೂಹ ಅಲ್ಲಿನ ಅವರ ಸಮಾಧಿ ಸನಿಹದಲ್ಲಿ ರಮಣರ ಉಪಸ್ಥಿತಿಯನ್ನು ಅನುಭವಿಸಿ ನೆಮ್ಮದಿ ಪಡೆದು ಹಿಂದಿರುಗುವರು. ರಮಣರು ದೇಹತ್ಯಾಗ ಮಾಡುವ ಮುನ್ನ, ಅಗಲಿಕೆಯ ನಿರೀಕ್ಷೆಯಲ್ಲಿ ಖಿನ್ನರಾಗಿದ್ದ ತಮ್ಮ ಭಕ್ತರಿಗೆ, 'ನಾನೆಲ್ಲಿಗೆ ಹೋಗಲಾದೀತು... ನಾನಿಲ್ಲೇ ಇರುವೆ.' ಎಂದಿದ್ದರಂತೆ. ಅದರ ಈ ಮಾತಿನ ಸತ್ಯವನ್ನು ರಮಣಾಶ್ರಮಕ್ಕೆ ಭೇಟಿ ನೀಡಿದ ಅನೇಕ ಭಕ್ತರು ಈಗಲೂ ಮನಗಾಣುವವರಾಗಿದ್ದಾರೆ. ರಮಣಾಶ್ರಮ ರಮಣರ ಆತ್ಮಪ್ರಭೆಯ ಕೇಂದ್ರವಾಗಿದೆಯಷ್ಟೆ ಎಂಬುದು ಇದರ ಅರ್ಥ.

ಹಾಗೆ ನೋಡಿದರೆ, ರಮಣರು ದೇಹತ್ಯಾಗ ಮಾಡುವ ಬಹು ಮುಂಚಿನಿಂದಲೂ, ಈ ಮಾತನ್ನು ಇನ್ನೊಂದು ಅರ್ಥದಲ್ಲಿ ಆಡುತ್ತಿದ್ದರು. ರಮಣರ ಸನ್ನಿಧಿಗೆ ಬಂದು ತಮ್ಮೆಲ್ಲ ಚಿಂತೆಗಳನ್ನು ಮರೆತು ನೆಮ್ಮದಿ ಪಡೆದುಕೊಳ್ಳುತ್ತಿದ್ದ ಅನೇಕ ಭಕ್ತರು ತಮ್ಮ ಊರುಗಳಿಗೋ, ದೇಶಗಳಿಗೋ ಮರಳಬೇಕಾಗಿ ಬಂದಾಗ ಅವರು, ತಾವೆಲ್ಲಿದ್ದರೂ ರಮಣರ ಕೃಪೆ ತಮ್ಮ ಮೇಲಿರಬೇಕೆಂದು ಬೇಡುತ್ತಿದ್ದರು. ಆಗೆಲ್ಲ ರಮಣರು, 'ನೀವೆಲ್ಲಿದ್ದರೇನು, ನಿಮ್ಮೊಂದಿಗೇ ಇರುವೆ' ಎಂದು ಅವರಿಗೆ ಸ್ವಾಂತ್ವನ ಹೇಳಿ ಕಳಿಸುತ್ತಿದ್ದರು. ಇರುವುದು ಆತ್ಮ ಮಾತ್ರ. ಇದನ್ನು ಸಾಕ್ಷಾತ್ಕರಿಸಿಕೊಂಡವರು ಎಲ್ಲೆಲ್ಲಿಯೂ ಎಂದೆಂದಿಗೂ ಇರುವರು ಎಂಬುದು ರಮಣರ ಈ ಬೀಜ ಮಾತಿನ ಅರ್ಥ.

(Self Realization) ಅಥವಾ 'ನಾನು ಯಾರು?' ಎಂಬುದನ್ನು ಕಂಡುಕೊಳ್ಳುವುದೇ ಮನುಷ್ಯನ ಎಲ್ಲ ಸಮಸ್ಯೆಗಳಿಗೆ, ಪ್ರಶ್ನೆಗಳಿಗೆ ಉತ್ತರ ಎಂಬುದು ರಮಣರ ಉಪದೇಶದ ಸಾರ. ಭಾರತೀಯ ಧಾರ್ಮಿಕ ಪರಂಪರೆ ಮನುಷ್ಯನ ಅಂತಿಮ ಗುರಿ ಮೋಕ್ಷ ಸಾಧನೆ ಎಂದು ಗುರುತಿಸಿದೆ. ಇದನ್ನು ಬೇರೆ ಬೇರೆ ಧಾರ್ಮಿಕ ಪರಿಭಾಷೆಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದಷ್ಟೆ. ಇದಕ್ಕಾಗಿ ಅದು ಈವರೆಗೆ ಜ್ಞಾನ, ಕರ್ಮ ಮತ್ತು ಭಕ್ತಿ ಮಾರ್ಗಗಳನ್ನು ರೂಪಿಸಿ ನೀಡಿದ್ದರೆ, ರಮಣರು ಹೊಸ ವಿಚಾರಶೀಲ ಮಾರ್ಗವನ್ನು ರೂಪಿಸಿ ನೀಡಿದರು. ವಿಜ್ಞಾನ ಯುಗದ ಆಧುನಿಕ ಮನುಷ್ಯನ ತಾರ್ಕಿಕ ಮನಸ್ಸಿಗೆ ಹೊಂದುವಂತೆ ಅವರು ರೂಪಿಸಿಕೊಟ್ಟ ಮಾರ್ಗವಿದು. ಶಂಕರಾಚಾರ್ಯರ ಜ್ಞಾನಮಾರ್ಗದ 'ನೇತಿ ನೇತಿ' ವಿಧಾನವನ್ನು ಇದು ಬಳಸುತ್ತದೆ. ಆದರೆ, ಇಲ್ಲಿ ಧರ್ಮ ಗ್ರಂಥಗಳ ಅಧ್ಯಯನದ ಅಥವಾ ಅವುಗಳಲ್ಲಿನ ವಿಧಿ ನಿಷೇಧಗಳನ್ನು ಪಾಲಿಸುವ ಮೂಲಕ ಸಾಧಿಸಿಕೊಳ್ಳಬೇಕಾದ ಜ್ಞಾನೋನ್ನತಿಯ ಶ್ರೇಣಿಗಳಗಲೀ, ಮಡಿ-ಮೈಲಿಗೆ ಮುಂತಾದ ಪರಿಶುದ್ಧಿಯ ಕಲ್ಪನೆಯ ಮುಜುಗರಗಳಾಗಲೀ ಇಲ್ಲ. ಹಾಗೇ ಯಾವ ಧ್ಯಾನ, ಯೋಗ, ತಪಸ್ಸು, ಕರ್ಮಾಚರಣೆಗಳ ಗೋಜಿಲ್ಲ. ನಾನು ಎಂಬುದು ಏನು, ಯಾರು? ಅದು ಎಲ್ಲಿ, ಯಾವಾಗ, ಏಕೆ ಹುಟ್ಟುತ್ತದೆ? ಅದು ನಿಜವಾಗಿಯೂ ಇದೆಯೇ? ಹಾಗಾದರೆ ನಿಜವಾಗಿ ಇರುವುದು ಏನು? ಎಂಬ ಪ್ರಶ್ನೆಗಳ ಮೂಲಕ ಅಂತರಂಗ ಬೋಧನೆ ಮಾಡಿಕೊಳ್ಳುವ ಸರಳ ಮಾರ್ಗವಿದು.

ಯಾವ ಆಳವಾದ ಧಾರ್ಮಿಕ ಗ್ರಂಥವನ್ನಾಗಲೀ ಓದಿರದಿದ್ದ ಮತ್ತು ಯಾವ ಕರ್ಮಾಚರಣೆಯನ್ನಾಗಲೀ ಮಾಡಿರದಿದ್ದ ೧೭ ವರ್ಷದ ಬಾಲಕನೊಬ್ಬ ಇದ್ದಕ್ಕಿದ್ದಂತೆ ತನಗಾದ ಸಾವಿನ ಅನುಭವದಿಂದ ಹೊಸ ಅರಿವಿಗೆ ಎಚ್ಚೆತ್ತುಕೊಂಡ. ಆಗ ಕೇಳಿಬಂದ ತನ್ನ ಅಂತರಂಗದ ಅವ್ಯಕ್ತ ಕರೆಗೆ ಓಗೊಟ್ಟು ಮನೆ ತೊರೆದ. ತಿರುವಣ್ಣಾಮಲೈನ ಅರುಣಾಚಲ ಬೆಟ್ಟಕ್ಕೆ ಬಂದ. ಅಲ್ಲಿ ಪರಿಪೂರ್ಣವಾದ

ಆತ್ಮಸಾಕ್ಷಾತ್ಕಾರವನ್ನು ಸಾಧಿಸಿ ರಮಣ ಮಹರ್ಷಿ ಎಂದು ಹೆಸರಾದ. ವೈರಾಗ್ಯದ ಪರಿಪೂರ್ಣ ಉದಾಹರಣೆಯಾಗಿ ಕೇವಲ ಕೌಪೀನಧಾರಿಯಾದ. ಆ ಕ್ಷಣದಿಂದ ತಾನು ದೇಹತ್ಯಾಗ ಮಾಡಿದ ಕಾಲದವರೆಗಿನ ೫೪ ವರ್ಷಗಳ ಕಾಲ ಅಲ್ಲಿಂದ ಕದಲದೆ ಆತ್ಮನಿಷ್ಠಾವಂತನಾಗಿ ಕೂತ. ಹೂವಿನ ಪರಿಮಳವನ್ನು ಅರಸಿ ಬರುವ ದುಂಬಿಗಳಂತೆ ಜಗತ್ತಿನ ಮೂಲೆ ಮೂಲೆಗಳಿಂದ ಬಂದ ಸಾವಿರಾರು ಭಕ್ತರಿಗೆ ತನ್ನ 'ನಾನು ಯಾರು?' ಎಂಬ ಶೋಧನೆಯ ಮಾರ್ಗವನ್ನು ಬೋಧಿಸಿದ. ಸಾಮಾನ್ಯರಿಗೂ ಆತ್ಮ ಸಾಕ್ಷಾತ್ಕಾರದ ಬಾಗಿಲು ತೆರೆದ.

-೨-

ರಮಣರ ಹುಟ್ಟು ಹೆಸರು ವೆಂಕಟರಮಣ. ಅವರು ತಮಿಳ್ನಾಡು ಮಧುರೈನಿಂದ ಸುಮಾರು ೪೦ ಕಿ.ಮೀ. ದೂರದಲ್ಲಿರುವ ತಿರುಚ್ಚುಳಿ ಎಂಬ ಸಣ್ಣ ಊರಿನಲ್ಲಿ ೧೮೭೯ರ ಡಿಸೆಂಬರ್ ೩೦ರ ಮಧ್ಯರಾತ್ರಿ ಹುಟ್ಟಿದರು. ಅಂದು ಶೈವರಿಗೆ ಪವಿತ್ರವಾದ ಆರುದ್ರ *ದರ್ಶನ* ಎಂಬ ಹಬ್ಬದ ದಿನ. ಆ ದಿನ ಶಿವ ತನ್ನ ಭಕ್ತರಾದ ಗೌತಮ, ವ್ಯಾಘ್ರಪಾದ ಮತ್ತು ಪತಂಜಲಿಯರಿಗೆ ನಟರಾಜನ ರೂಪದಲ್ಲಿ ದರ್ಶನ ನೀಡಿದ ಎಂಬುದು ಸಾಂಪ್ರದಾಯಿಕ ತಮಿಳು ಶಿವಭಕ್ತರ ನಂಬಿಕೆ. ವೆಂಕಟರಮಣನ ತಂದೆ ತಾಯಿಗಳಿಬ್ಬರೂ ಶಿವಭಕ್ತರಾದರೂ ತಮ್ಮ ಈ ಮಗನಿಗೆ ವಿಷ್ಣುವಿನ ಹೆಸರಿಟ್ಟಿದ್ದು ಕುಟುಂಬದ ಉದಾರ ನೆಲೆಯ ಧಾರ್ಮಿಕ ಮನೋಭಾವನೆಯ ದ್ಯೋತಕ ಎಂದು ಭಾವಿಸಬಹುದು. ವೆಂಕಟರಮಣನ ತಂದೆ ಸುಂದರಂ ಅಯ್ಯರ್ ಊರಿನ ಅನೌಪಚಾರಿಕ ಪ್ಲೀಡರ್ ಆಗಿ ಕೆಲಸ ಮಾಡುತ್ತಾ ಊರಿನ ಗಣ್ಯರಲ್ಲೊಬ್ಬರು ಎನಿಕೊಂಡವರು. ಆರ್ಥಿಕ ಸ್ಥಿತಿಯೂ ಸಾಧಾರಣವಾಗಿತ್ತು. ತಾಯಿ ಅಳಗಮ್ಮಾಳ್ ದೈವಭಕ್ತೆಯಾದ ಸದ್ಗೃಹಸ್ಥೆ.

ಸುಂದರಂ ಅಯ್ಯರ್‌ಗೆ ನಾಲ್ವರು ಮಕ್ಕಳು. ಮೊದಲು ಮೂರು ಗಂಡು: ನಾಗಸ್ವಾಮಿ, ವೆಂಟಕರಮಣ ಮತ್ತು ನಾಗಸುಂದರಂ. ಕೊನೆಯವಳು ಹೆಣ್ಣು: ಅಲಮೇಲು. ಆದರೆ ಮಕ್ಕಳು ಇನ್ನೂ ಶಾಲಾ ಶಿಕ್ಷಣ ಮಾಡುತ್ತಿರುವಾಗಲೇ ಸುಂದರಂ ಅಕಾಲಮರಣಕ್ಕೆ ತುತ್ತಾದರು. ಆಗ ವೆಂಕಟರಮಣ ತಿರುಚ್ಚುಳಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ, ಹತ್ತಿರದ ದಿಂಡುಗಲ್‌ನ ಮಾಧ್ಯಮಿಕ ಶಾಲೆಗೆ ಸೇರಿದ್ದ. ತಂದೆಯ ಮರಣದಿಂದಾಗಿ ವಿದ್ಯಾಭ್ಯಾಸ ಮುಂದುವರೆಸಲು ಆತ ತನ್ನ ಸೋದರ-ಸೋದರಿಯೊಂದಿಗೆ ತಮ್ಮ ಚಿಕ್ಕಪ್ಪರಲ್ಲಿ ಒಬ್ಬರಾಗಿದ್ದ ಸುಬ್ಬಯ್ಯರ್‌ರವರ ಆಶ್ರಯಕ್ಕಾಗಿ ಮಧುರೈಗೆ ಹೋಗಬೇಕಾಯಿತು. ವೆಂಕಟರಮಣ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಅಲ್ಲಿನ ಸ್ಕಾಟ್ಸ್ ಮಿಡ್ಲ್ ಸ್ಕೂಲ್‌ನಲ್ಲಿ ಮುಗಿಸಿ, ಪ್ರೌಢಶಾಲಾ ಶಿಕ್ಷಣಕ್ಕಾಗಿ

ಅಮೆರಿಕನ್ ಮಿಷನ್ ಹೈಸ್ಕೂಲ್ ಸೇರಿದ. ಈ ಪ್ರೌಢಶಾಲೆಯಲ್ಲಿ ಕಲಿತ ಪ್ರಾಥಮಿಕ ಬೈಬಲ್ ಪಾಠಗಳೇ ಆತ ಪಡೆದ ಮೊದಲ ಧಾರ್ಮಿಕ ಶಿಕ್ಷಣವಾಗಿತ್ತು. ಮನೆಯಲ್ಲಿನ ಧಾರ್ಮಿಕ ವಾತಾವರಣದಿಂದಾಗಿ ಎಲ್ಲ ಹುಡುಗರಂತೆ ವೆಂಕಟರಮಣನಿಗೂ ಮನೆಯಲ್ಲಿ ಮತ್ತು ದೇವಸ್ಥಾನಗಳಲ್ಲಿ ದೇವರ ಮೂರ್ತಿಗಳಿಗೆ ಮುಗ್ಧವಾಗಿ ನಮಸ್ಕರಿಸುವ ಪರಿಪಾಠ ಇತ್ತು. ಇದರ ಹೊರತಾಗಿ ಆತ ಧಾರ್ಮಿಕ ಚಟುವಟಿಕೆಗಳಲ್ಲಿ ವಿಶೇಷ ಆಸಕ್ತಿಯನ್ನೇನೂ ತೋರಿಸುತ್ತಿರಲಿಲ್ಲ.

ಓದು ಬರಹಗಳಲ್ಲೂ ವೆಂಟಕರಮಣನ ಆಸಕ್ತಿ ಅಷ್ಟಷ್ಟಕ್ಕೆ. ಆದರೆ ಕುಸ್ತಿ, ಕಾಲ್ಚೆಂಡು, ಅಂಗಸಾಧನೆ, ಈಜು ಮುಂತಾದ ಆಟಗಳು ಆತನಿಗೆ ಅಚ್ಚುಮೆಚ್ಚು ಮತ್ತು ಅವುಗಳಲ್ಲಿ ಎಲ್ಲರಿಗಿಂತ ಮುಂದು. ವೆಂಕಟರಮಣನಿಗೆ ಅದಕ್ಕೆ ತಕ್ಕಂತೆ ಒಳ್ಳೆಯ ಮೈಕಟ್ಟೂ ಇದ್ದಿತು. ಇವನೆದುರು ಆಟಗಳಲ್ಲಿ ಸೋತ ಆತನ ಗೆಳೆಯರು ಅವನು ಮಲಗಿದ್ದಾಗ ಅವನನ್ನು ಮನೆಯ ಹೊರಗೆ ಎತ್ತಿಕೊಂಡು ಹೋಗಿ ಮನಸಾರೆ ಬಡಿದು ಹಾಗೇ ಮನೆಯೊಳಗೆ ತಂದು ಮಲಗಿಸುತ್ತಿದ್ದರಂತೆ! ಅಷ್ಟು ಗಾಢ ನಿದ್ರೆಯ ಪ್ರವೃತ್ತಿ ವೆಂಕಟರಮಣನದು. ಒಮ್ಮೆ ಚಿಲಕ ಹಾಕಿಕೊಂಡು ಮಲಗಿದ್ದ ಈತನನ್ನು ಕೂಗಿ ಎಬ್ಬಿಸಲಾಗದೆ, ಮನೆಯವರು ಬಾಗಿಲು ಒಡೆದು ಒಳಗೆ ಬರಬೇಕಾಯಿತಂತೆ....

-೨-

ಇಂತಹ ಜಡ ಭರತನ ಚೇತನದ ಆಳದಲ್ಲೆಲ್ಲೋ ದೈವಿಕವಾದ ಕಿಡಿಯೊಂದು ಮಲಗಿತ್ತು. ಆತನ ಹದಿನಾರನೇ ವಯಸ್ಸಿನಲ್ಲಿ–೧೮೯೫ರಲ್ಲಿ–ದೂರದ ಬಂಧುವೊಬ್ಬರು ಮನೆಗೆ ಬಂದರು. ವೆಂಕಟರಮಣ ಕುತೂಹಲದಿಂದ ಅವರೆಲ್ಲಿಂದ ಬಂದಿದ್ದು ಎಂದು ವಿಚಾರಿಸಿದಾಗ ಅವರು ಕೊಟ್ಟ 'ಅರುಣಾಚಲ' ಎಂಬ ಉತ್ತರ, ಆತನಲ್ಲಿ ಹೊಸ ಸಂವೇದನೆಯನ್ನು ಉಂಟು ಮಾಡಿತು. ಆ ಅರುಣಾಚಲ ಎಲ್ಲಿದೆ ಎಂದು ಅದರ ವಿವರ ಕೇಳಿ, ಆ ತಿರುವಣ್ಣಾಮಲೈ, ಅಲ್ಲಿನ ಆ ಬೆಟ್ಟದ ಬಗ್ಗೆ ಅವನಲ್ಲಿ ವಿಚಿತ್ರ ಕುತೂಹಲ ಉಂಟಾಯಿತು. ಇದಕ್ಕೆ ಪೂರಕವಾಗಿ ಕೆಲವೇ ದಿನಗಳಲ್ಲಿ ಮನೆಯ ಹಿರಿಯರು ತಂದಿಟ್ಟಿದ್ದ 'ಪೆರಿಯ ಪುರಾಣಂ' ಎಂಬ ಅರವತ್ತನಾಲ್ಕು ಶಿವಭಕ್ತರ ಚರಿತ್ರೆಯನ್ನೊಳಗೊಂಡ ತಮಿಳು ಪುಸ್ತಕ ಆತನ ಕೈಗೆ ಸಿಕ್ಕಿತು. ಇದರ ಓದು ವೆಂಕಟರಮಣನ ಬದುಕಿನ ದಿಕ್ಕು, ರುಚಿಗಳನ್ನೇ ಬದಲಾಯಿಸತೊಡಗಿತು. ಶಿವಭಕ್ತರ ಪವಾಡ ಸದೃಶ ಬದುಕಿನ ವಿವರಗಳು ಆತನಲ್ಲಿ ರೋಮಾಂಚನವನ್ನುಂಟುಮಾಡಿದ್ದವು. ಈಗ ವೆಂಕಟರಮಣ ಮಧುರೈ ದೇವಸ್ಥಾನಕ್ಕೆ ಹೋದರೆ ಅಲ್ಲಿನ ಮೂರ್ತಿಗಳ ಮುಂದೆ ಆರ್ದ್ರನಾಗಿ ಮೈಮರೆತು ಕೈ ಮುಗಿದು

ನಿಲ್ಲುತ್ತಿದ್ದ. ಕ್ರಮೇಣ ಗೆಳೆಯರೊಂದಿಗೆ ಬೆರೆಯುವುದು ಕಡಿಮೆಯಾಯಿತು. ಏಕಾಂತವನ್ನು ಇಷ್ಟಪಡತೊಡಗಿದ ವೆಂಟಕರಮಣ, ಆಗಾಗ ಧ್ಯಾನಲೀನನಾಗತೊಡಗಿದ. ಇದನ್ನು ಗಮನಿಸುತ್ತಿದ್ದ ಅಣ್ಣ ನಾಗಸ್ವಾಮಿ 'ಈ ಚೇಷ್ಟೆಗಳನ್ನೆಲ್ಲ ಬಿಟ್ಟು ಓದುವ ಕಡೆ ಗಮನ ಕೊಡು' ಎಂದು ಛೇಡಿಸುತ್ತಿದ್ದ. ಆದರೆ ವೆಂಕಟರಮಣ ತನ್ನ ಒಳಗಿನ ಸೆಳೆತದೆದುರು ಅಸಹಾಯಕನಾಗಿದ್ದ.

೧೮೯೬ರ ಜುಲೈ ತಿಂಗಳ ಒಂದು ದಿನ ವೆಂಕಟರಮಣನ ಬದುಕಿನಲ್ಲಿ– ಆತನಿಗೆ ಆಗ ೧೭ ವರ್ಷ–ಮಹಾಘಟನೆಯೊಂದು ಜರುಗಿತು. ಮಧುರೈನ ಚಿಕ್ಕಪ್ಪನ ಮನೆಯ ಮಾಳಿಗೆಯ ಕೊಠಡಿಯಲ್ಲಿ ಸುಮ್ಮನೆ ಕುಳಿತಿದ್ದಾಗ ಆತನನ್ನು ಇದ್ದಕ್ಕಿದ್ದಂತೆ ಸಾವಿನ ಭಯ ಆವರಿಸಿತು. ತಾನು ಸಾಯುತ್ತಿದ್ದೇನೆ ಎಂಬ ತೀವ್ರ ಭಾವನೆ ಉಂಟಾಯಿತು. ಹುಡುಗ ಏನೂ ಮಾಡಲೂ ತೋಚದೆ, ಸಾವನ್ನು ಪರಿವೀಕ್ಷಿಸತೊಡಗಿದ. ಏನಾಗಿಬಿಡುತ್ತದೋ ನೋಡೋಣ ಎಂಬ ಭಾವನೆಯಲ್ಲಿ ಕೈಕಾಲುಗಳನ್ನು ಸೆಟೆದು ಉಸಿರು ಬಿಗಿ ಹಿಡಿದು ಶವದಂತೆ ಮಲಗಿದ. ಆ ಅನುಭವವನ್ನು, ವೆಂಕಟರಮಣನು ರಮಣ ಮಹರ್ಷಿಯಾದ ಎಷ್ಟೋ ವರ್ಷಗಳ ನಂತರ ನೆನಪಿಸಿಕೊಂಡು ಹೇಳಿದ್ದು ಹೀಗೆ:

> *"ಸಾವಿನ ಮಹಾಭಯದ ಆ ಆಘಾತವು ನನ್ನ ಮನಸ್ಸನ್ನು ಅಂತರ್ಮುಖಿಯನ್ನಾಗಿ ಮಾಡಿ ಒಳ ನೂಕಿತು. ಮನಸ್ಸಿನಲ್ಲಿ ಶಬ್ದಗಳ ಗೋಜಿಲ್ಲದೆ ಹೀಗೆ ಯೋಚಿಸಿದೆನು: 'ಈಗ ಸಾವು ಬಂದಿದೆ. ಇದರ ಅರ್ಥ ಏನು? ಸಾಯುವುದು ಏನು? ಈ ದೇಹವಷ್ಟೇ ಸಾಯುತ್ತದೆ..... ಸರಿ, ಈ ದೇಹ ಸತ್ತಿದೆ. ಜಡವಾದ ಇದನ್ನು ಸ್ಮಶಾನಕ್ಕೆ ಒಯ್ದು ಸುಟ್ಟು ಬೂದಿ ಮಾಡಲಾಗುವುದು. ಆದರೆ ಈ ದೇಹ ಹೀಗೆ ಕೊನೆಗೊಂಡಾಗ ನಾನೂ ಕೊನೆಗಾಣುವೆನೇ? ಜಡವಾದ ದೇಹ ಇಲ್ಲವಾದ ಮಾತ್ರಕ್ಕೆ ನಾನೆಂಬ ಅರಿವು ಇಲ್ಲದಾಗದು.... ದೇಹದಿಂದ ಬೇರೆಯೇ ಆದ ನನ್ನ ಅಸ್ತಿತ್ವದ ಸಂಪೂರ್ಣ ಶಕ್ತಿ ನನ್ನಲ್ಲಿ ತೀವ್ರವಾಗಿ ಉಕ್ಕಿ ಬರುತ್ತಿದ್ದುದನ್ನೂ, ನನ್ನೊಳಗಿಂದ 'ನಾನು' ಎಂಬ ಅನುರಣನ ಬಲವಾಗಿ ಹೊಮ್ಮುತ್ತಿದ್ದುದನ್ನೂ, ನಾನು ಅನುಭವಿಸುತ್ತಿರುವೆ. ಹಾಗಾಗಿ 'ನಾನು' ಎಂಬುದು ದೇಹ ಮೀರಿದ ಚೈತನ್ಯ. ಭೌತಿಕ ದೇಹ ಸಾಯುತ್ತದೆ, ಆದರೆ ಅದನ್ನು ಮೀರಿದ ಚೈತನ್ಯವನ್ನು ಸಾವು ಮುಟ್ಟದು. ಆದುದರಿಂದ ನಾನು ಸಾವಿಲ್ಲದ ಚೈತನ್ಯ!' ಇದೆಲ್ಲವೂ ಕೇವಲ ಬೌದ್ಧಿಕ ಪ್ರಕ್ರಿಯೆಯಾಗಿರಲಿಲ್ಲ. ಯಾವುದೇ ವಾದ–ವಿವಾದವಿಲ್ಲದೆ ತಕ್ಷಣ ಗ್ರಹಿಸಿದ*

ಜೀವಂತ ಸತ್ಯವಾಗಿ ನನ್ನಲ್ಲಿ ಝುಗ್ಗನೆ ಪ್ರಕಾಶಿತವಾಗಿತ್ತು. ಆ 'ನಾನು' ಎಂಬುದು ತೀರಾ ಸತ್ಯವಾದುದಾಗಿತ್ತು. ಮತ್ತು ಆ ನನ್ನ ಸ್ಥಿತಿಯಲ್ಲಿನ ಏಕೈಕ ಸತ್ಯವೂ ಆಗಿತ್ತು. ಆ 'ನಾನು' ಅಥವಾ ಆ ನನ್ನ 'ಆತ್ಮ' ಅಲ್ಲಿಂದಾಚೆಗೆ ನನ್ನ ಅರಿವಿನ ಕೇಂದ್ರವೇ ಆಯಿತು. ನನ್ನ ದೇಹದ ಎಲ್ಲ ಪ್ರಜ್ಞಾಪೂರ್ವಕ ಚಟುವಟಿಕೆಗಳು ಅಲ್ಲಿಂದಲೇ ಹೊಮ್ಮವುವು ಎಂಬುದು ಅರಿವಿಗೆ ಬಂತು.... ಇದರಿಂದಾಗಿ ನನಗೆ ಮರಣಭಯವೆಂಬುದೇ ಇಲ್ಲವಾಯಿತು..."

ಅಂದು ಹೀಗೆ ಆತ್ಮಾನುಭವ ಪಡೆದ ವೆಂಕಟರಮಣ ಕ್ರಮೇಣ ಲೋಕವಿಮುಖನಾಗತೊಡಗಿದ. ಶಾಲೆಯ ಪಾಠಗಳು ಭಾರವೆನಿಸಿತೊಡಗಿದವು. *ಪೆರಿಯ ಪುರಾಣಂ*ನ ಕಥೆಗಳು ಜೀವಂತವಾಗಿ ಕಾಡತೊಡಗಿದವು. ಮಧುರೈ ದೇವಸ್ಥಾನದ ಮೂರ್ತಿಗಳು ಒಂದೇ ಸಮನೆ ಕರೆಯತೊಡಗಿದವು. ಇಂತಹ ಸಂದಿಗ್ಧ ಸ್ಥಿತಿಯಲ್ಲಿದ್ದ ವೆಂಕಟರಮಣ ಒಂದು ಬೆಳಿಗ್ಗೆ–೧೮೯೬ರ ಆಗಸ್ಟ್ ೨೯ರಂದು– ಮನೆಯ ಮಹಡಿಯ ಕೊಠಡಿಯಲ್ಲಿ ಶಾಲೆಗೆ ಹೋಗುವ ತಯಾರಿ ನಡೆಸಿದ್ದ. ಹಿಂದಿನ ದಿನ ಶಾಲೆಯಲ್ಲಿ ವಿಧಿಸಿದ್ದ ಇಂಗ್ಲೀಷ್ ವ್ಯಾಕರಣ ಪಾಠವೊಂದನ್ನು ಮೂರು ಬಾರಿ ಬರೆಯುವ ಶಿಕ್ಷೆಯ ಭಾಗವಾಗಿ ಅದನ್ನು ಎರಡು ಬಾರಿ ಬರೆದು ಮುಗಿಸಿದ್ದ. ಮೂರನೆಯ ಬಾರಿ ಬರೆಯಲು ಬೇಸರ ಬಂದಂತೆನಿಸಿ, ಸುಮ್ಮನೆ ಹಾಗೇ ಕೂತಿದ್ದವನು ಒಂದು ಕ್ಷಣ ತನಗೆ ಗೊತ್ತಿಲ್ಲದಂತೆಯೇ ಧ್ಯಾನಲೀನನಾದ. ಪಕ್ಕದಲ್ಲೇ ಇದ್ದ ಅವರಣ್ಣ ನಾಗಸ್ವಾಮಿ ಇದನ್ನು ಕಂಡು 'ಇಂತಹ ವೈರಾಗ್ಯವಿದ್ದವರಿಗೆ ಮನೆ ಮಠ ಏಕೆ ಬೇಕು?' ಎಂದು ರೇಗಿದ. ಎಚ್ಚೆತ್ತ ವೆಂಕಟರಮಣನಿಗೆ ತಕ್ಷಣ ಅಣ್ಣನ ಈ ಮಾತು ನಿಜವೆನಿಸಿತು. 'ಹೌದು, ನನಗೇಕೆ ಇದೆಲ್ಲ?' ಎಂದೆನ್ನಿಸಿ, ತಾನು ಇನ್ನು ಇಲ್ಲಿ ಇರುವುದು ಸರಿಯಲ್ಲ ಎಂದು ತೀರ್ಮಾನಿಸಿದ. ಒಳಗೇ ಸುಪ್ತವಾಗಿದ್ದ, ಅರುಣಾಚಲದ ಕರೆ ಒಮ್ಮೆಗೇ ಸ್ಫೋಟಿಸಿತು.

ಪುಸ್ತಕಗಳನ್ನು ಮಡಿಚಿಟ್ಟು ತಕ್ಷಣ ಎದ್ದ ವೆಂಕಟರಮಣ, ತನಗೆ ಮಧ್ಯಾಹ್ನ ೧೨.೦೦ ಗಂಟೆಗೆ ಭೌತಶಾಸ್ತ್ರದ ವಿಶೇಷ ತರಗತಿ ಇದೆಯೆಂದು ಹೊರಟ. ನಾಗಸ್ವಾಮಿ, ಹಾಗಿದ್ದರೆ ಕೆಳಗೆ ಡಬ್ಬಿಯಲ್ಲಿರುವ ಐದು ರೂಪಾಯಿಗಳನ್ನು ತೆಗೆದುಕೊಂಡು ತನ್ನ ಕಾಲೇಜಿನ ಶುಲ್ಕ ಕಟ್ಟಲು ಮರೆಯಬೇಡವೆಂದು ಸೂಚಿಸಿದ. ವೆಂಕಟರಮಣ ಚಿಕ್ಕಮ್ಮನಿಂದ ಐದು ರೂಪಾಯಿ ಪಡೆದು ಊಟ ಮಾಡಿದ. ನಂತರ ಮನೆಯಲ್ಲಿದ್ದ ಹಳೆಯ ಭೂಪಟವೊಂದನ್ನು ಹುಡುಕಿ ತಿರುವಣ್ಣಾಮಲೈಗೆ

ಹೋಗುವ ರೈಲ್ವೇ ಮಾರ್ಗವನ್ನು ನೋಡಿಕೊಂಡ. ಅಲ್ಲಿಗೆ ಸುಮಾರು ಮೂರು ರೂಪಾಯಿಗಳ ಟಿಕೆಟ್ ಆಗಬಹುದೆಂದು ಅಂದಾಜಿಸಿ, ಒಂದು ಚೀಟಿ ಬರೆದು ಅದರೊಂದಿಗೆ ಎರಡು ರೂಪಾಯಿಗಳನ್ನು ಇರಿಸಿದ. ತಾನು ಕಾಣೆಯಾದನೆಂದು ಮನೆಯವರು ಅನಗತ್ಯ ಗಾಬರಿಯಾಗಬಾರದೆಂದು ಬರೆದ ಆ ಚೀಟಿಯ ಒಕ್ಕಣೆ ಹೀಗಿತ್ತು

> *'ನಾನು ನನ್ನ ತಂದೆಯನ್ನು ಹುಡುಕುತ್ತಾ ಆತನ ಆದೇಶದಂತೆ ಇಲ್ಲಿಂದ ಹೊರಟಿದ್ದೇನೆ. ಇದು ಸತ್ಕಾರ್ಯಕ್ಕಾಗಿ ಹೊರಟಿದೆ. ಆದುದರಿಂದ ಇದರ ಈ ವ್ಯವಹಾರದ ಬಗ್ಗೆ ಯಾರೂ ದುಃಖಿಸಕೂಡದು. ಇದನ್ನು ಹುಡುಕಲೂ ಹಣ ವ್ಯಯಿಸಬಾರದು. ನನ್ನ ಕಾಲೇಜಿನ ಶುಲ್ಕವನ್ನು ಕಟ್ಟಿಲ್ಲ. ಎರಡು ರೂಪಾಯಿಗಳನ್ನು ಇದರ ಜೊತೆಗೆ ಇಟ್ಟಿದ್ದೇನೆ...'*

ಸಹಿ ಇಲ್ಲದ ಈ ಒಕ್ಕಣೆ, ಅರುಣಾಚಲೇಶ್ವರನನ್ನು ತಂದೆಯೆಂದು ಕರೆದಿತ್ತು. ಆತನ ಆದೇಶದಂತೆಯೇ ಆತನನ್ನು ಹುಡುಕುತ್ತಾ ಹೊರಟಿರುವುದಾಗಿ ಹೇಳಿತ್ತು. ಹಾಗೇ, ತನ್ನನ್ನು 'ಇದು'-ಅಂದರೆ ಆತ್ಮಾನುಭವ ಪರಿಪೂರ್ಣವಾಗದ ಜಡ-ಎಂದು ಕರೆದುಕೊಂಡಿತ್ತು. ಈ ಎಲ್ಲವೂ ವೆಂಕಟರಮಣನ ಮನಸ್ಸಿನಲ್ಲಿ ಆ ಹೊತ್ತಿಗೆ ಉಂಟಾಗಿದ್ದ ತಳಮಳ, ಅದನ್ನು ಪರಿಹರಿಸಿಕೊಳ್ಳಲು ಆತನಲ್ಲಿ ಮೂಡಿದ ದೃಢ ನಿಶ್ಚಯ ಮತ್ತು ತನ್ನ ಆಗಿನ ಸ್ಥಿತಿ ಬಗ್ಗೆ ಇದ್ದ ಸ್ಪಷ್ಟ ಅರಿವು ಇವುಗಳ ಪರಿಚಯ ಮಾಡಿಕೊಡುತ್ತದೆ. ಇಂತಹ ವೆಂಕಟರಮಣ ಬಂದ ದಾರಿಯನ್ನೂ ಮತ್ತೆ ಎಂದೂ ಹಿಂದಿರುಗಿ ನೋಡದಿದ್ದುದು ಸಹಜವೇ ಆಗಿತ್ತು.

-೩-

ವೆಂಕಟರಮಣ ಅಂದು ಮಧುರೈ ರೈಲ್ವೆ ನಿಲ್ದಾಣವನ್ನು ತಲುಪಿದಾಗ ಆತ ಹತ್ತಬೇಕೆಂದಿದ್ದ ರೈಲು ಗಾಡಿಯ ಸಮಯ ಆಗಿ ಹೋಗಿತ್ತು. ಆದರೆ ಅದು ಅಂದು ಆತನಿಗೋಸ್ಕರವೆಂಬಂತೆ ತಡವಾಗಿ ಬಂತು. ಆತ ಹಳೆಯ ಭೂಪಟ ನೋಡಿದ್ದರಿಂದ, ತಿರುವಣ್ಣಾಮಲೈಗೆ ಹೊಸದಾಗಿ ರೈಲು ಮಾರ್ಗವಾಗಿರುವುದು ಗೊತ್ತಾಗದೆ, ತಿಂಡಿವನಂ ಎಂಬ ದೂರದ ಊರಿಗೆ ಟಿಕೆಟ್ ಕೊಂಡಿದ್ದ. ಆಗ ಆತನಲ್ಲಿ ಉಳಿದಿದ್ದುದು ಕೇವಲ ಮೂರು ಆಣೆಗಳು. ರೈಲುಗಾಡಿಯಲ್ಲಿ ಸಹಪ್ರಯಾಣಿಕ ಮೌಲ್ವಿಯೊಬ್ಬರು ಈ ಹುಡುಗನ ಬಗ್ಗೆ ಕುತೂಹಲ ತಾಳಿ ಎಲ್ಲಿಗೆ ಹೋಗಬೇಕೆಂದು

ವಿಚಾರಿಸಿದರು. ಅವರು ವೆಂಕಟರಮಣನಿಗೆ ವಿಲ್ಲುಪುರಂನಲ್ಲಿ ಇಳಿದು ಬೇರೊಂದು ಗಾಡಿ ಹತ್ತಿ, ತಿರುವಣ್ಣಾಮಲ್ಯೆಗೆ ಹೋಗುವಂತೆ ಮಾರ್ಗದರ್ಶನ ಮಾಡಿದರು.

ಅದರಂತೆ ವಿಲ್ಲುಪುರಂನಲ್ಲಿ ಬೆಳಗಿನ ಝಾವ ೨ ಗಂಟೆಗೆ ರೈಲಿನಿಂದ ಇಳಿದಾಗ ವೆಂಕಟರಮಣನಿಗೆ ವಿಪರೀತ ಹಸಿವಾಗಿತ್ತು. ಆತ ಆಹಾರ ಹುಡುಕಿಕೊಂಡು ಊರೊಳಗೆ ಹೊರಟ. ಹೋಟೆಲೊಂದರ ಮಾಲೀಕ ಮಧ್ಯಾಹ್ನದವರೆಗೆ ಕಾದರೆ ಮಾತ್ರ ಊಟ ಸಿಗುತ್ತದೆಂದು ಹೇಳಿದ. ಅಲ್ಲಿಯವರೆಗೆ ವೆಂಕಟರಮಣ ಅಲ್ಲಿಯೇ ಧ್ಯಾನಾಸಕ್ತನಾಗಿ ಕುಳಿತ. ಇದನ್ನು ಗಮನಿಸಿದ ಹೋಟೆಲ್ ಮಾಲೀಕ ಊಟಕ್ಕಾಗಿ ಹಣ ಪಡೆಯಲಿಲ್ಲ. ವೆಂಕಟರಮಣ ಆತನಿಂದ ತಿರುವಣ್ಣಾಮಲ್ಯೆಗೆ ದಾರಿ ಯಾವುದೆಂದು ಕೇಳಿದ. ಹುಡುಗನ ಬಳಿ ಇದ್ದ ಹಣದಲ್ಲಿ ಮಾಂಬಲಪತ್ತು ಎಂಬಲ್ಲಿವರೆಗೆ ರೈಲಲ್ಲಿ ಹೋಗಿ, ನಂತರ ತಿರುವಣ್ಣಾಮಲ್ಯೆಗೆ ನಡೆದು ಹೋಗಬಹುದೆಂದು ಆತ ಸೂಚಿಸಿದ. ಅದರಂತೆ ವೆಂಕಟರಮಣ ಉಳಿದಿದ್ದ ಹಣದಲ್ಲಿ ಟಿಕೆಟ್ ಖರೀದಿಸಿ ಮಾಂಬಲಪತ್ತುಗೆ ಆ ರಾತ್ರಿ ರೈಲನ್ನೇರಿ ಆ ಊರನ್ನು ತಲುಪಿದ. ಆಗ ಮಧ್ಯಾಹ್ನದ ಉರಿಬಿಸಿಲು. ಆ ಉರಿ ಬಿಸಿಲಿನಲ್ಲಿಯೇ ಬಾಲಕ ತಿರುಣ್ಣಾಮಲ್ಯೆನತ್ತ ನಡೆಯತೊಡಗಿದ.

ಸಂಜೆ ಹೊತ್ತಿಗೆ ಅರಿಯನಲ್ಲೂರು ಎಂಬ ಊರು ತಲುಪಿದಾಗ, ಊರಿನ ದೇವಸ್ಥಾನದ ಗೋಪುರ ಕಂಡು ವೆಂಕಟರಮಣ ವಿಶ್ರಾಂತಿಗಾಗಿ ಅಲ್ಲಿಗೆ ಧಾವಿಸಿ, ಪಟಾಂಗಣದಲ್ಲಿ ಕೂತುಕೊಂಡ. ಸ್ವಲ್ಪ ಹೊತ್ತಿನಲ್ಲೇ ಪೂಜಾರಿ ಬಂದು ದೇವಸ್ಥಾನದ ಬಾಗಿಲು ತೆಗೆದು, ಪೂಜೆ ಆರಂಭಿಸಿದ. ಇದ್ದಕ್ಕಿದ್ದಂತೆ ಬಾಲಕ ವೆಂಕಟರಮಣನ ಕಣ್ಣುಗಳು ಕೋರೈಸುವಂತೆ ಪ್ರಜ್ವಲ ಬೆಳಕೊಂದು ದೇವಾಲಯದ ತುಂಬ ಝಗಝಗಿಸಿತು. ಬಾಲಕನಿಗೆ ಆಶ್ಚರ್ಯವಾಗಿ ಈ ಬೆಳಕು ಎಲ್ಲಿಂದ ಬರುತ್ತಿದೆ ಎಂದು ಹುಡುಕಿಕೊಂಡು ದೇವಸ್ಥಾನದ ಗರ್ಭಗುಡಿ ಕಡೆ ನಡೆದ. ಅಲ್ಲಿ ಯಾವ ಬೆಳಕೂ ಇರಲಿಲ್ಲ. ಅಷ್ಟೇ ಅಲ್ಲ, ಆ ಪ್ರಕಾಶ ಕ್ರಮೇಣ ಕಡಿಮೆಯಾಗಿ ಮಾಯವಾಯಿತು. ವೆಂಕಟರಮಣ ಅಲ್ಲಿಯೇ ಧ್ಯಾನಲೀನನಾದ. ಪೂಜಾರಿ, ಪೂಜೆಯ ನಂತರ ದೇವಸ್ಥಾನದ ಬಾಗಿಲು ಹಾಕಲು ಆತನನ್ನು ಧ್ಯಾನದಿಂದ ಎಬ್ಬಿಸಿದ. ಪ್ರಯಾಣದ ಆಯಾಸ ಮತ್ತು ಹಸಿವಿನಿಂದ ಸುಸ್ತಾಗಿದ್ದ ವೆಂಕಟರಮಣ ಸ್ವಲ್ಪವಾದರೂ ಆಹಾರಕ್ಕಾಗಿ ಕೇಳಿದ. ಪೂಜಾರಿ ಬಳಿ ಪ್ರಸಾದ ಸಿದ್ಧವಿದ್ದರೂ, ಪಕ್ಕದ ಕೀಲೂರಿನ ದೇವಸ್ಥಾನದಲ್ಲಿ ಪೂಜೆಯಾಗುವವರೆಗೂ ಯಾರಿಗೂ ಏನು ಕೊಡುವಂತಿಲ್ಲ ಎಂದ. ಕೊನೆಗೆ ಅಲ್ಲಿ ಬೆಳಗಿನವರೆಗೆ ಮಲಗಲಾದರೂ ಬಾಲಕ ಅನುಮತಿ ಕೇಳಿದಾಗ ಪೂಜಾರಿ ಸಾಧ್ಯವಿಲ್ಲ ಎಂದ.

ವೆಂಕಟರಮಣ ಅಲ್ಲಿಂದ ಒಂದು ಕಿ.ಮೀ. ದೂರದ ಕೀಲೂರಿಗೆ ಆ ಪೂಜಾರಿ ಮತ್ತು ಅವನ ಮೇಳದವರೊಂದಿಗೆ ನಡೆದು ಹೊರಟ. ಅಲ್ಲಿನ ದೇವಾಲಯವನ್ನು ಪ್ರವೇಶಿಸುತ್ತಿದ್ದಂತೆ ವೆಂಕಟರಮಣ ಮತ್ತೆ ಧ್ಯಾನಸ್ಥನಾದ. ರಾತ್ರಿ ತಡವಾಗಿ ಪೂಜೆ ಮುಗಿದು, ಎಲ್ಲರಿಗೂ ಪ್ರಸಾದ ಹಂಚಿಕೆಯಾಗುವ ವೇಳೆಗೆ ಮೇಳದವರು ಅವನನ್ನು ಎಬ್ಬಿಸಿದರು. ಪೂಜಾರಿ ಅಲ್ಲಿ ಇರುವವರಿಗೇ ಪ್ರಸಾದ ಸಾಲುತ್ತಿಲ್ಲವೆಂದು ಮತ್ತೆ ಆತನಿಗೆ ಆಹಾರ ನೀಡಲು ನಿರಾಕರಿಸಿದ. ಆದರೆ ಡೋಲು ಬಾರಿಸುವ ಕಲಾವಿದನೊಬ್ಬ ವೆಂಕಟರಮಣನ ಮೇಲೆ ಕರುಣೆಯಿಟ್ಟು ತನ್ನ ಪಾಲಿನ ಪ್ರಸಾದವನ್ನು ಅವನಿಗೆ ನೀಡುವಂತೆ ಪೂಜಾರಿಯನ್ನು ಕೋರಿದ. ಪೂಜಾರಿ ಎಲೆಯೊಂದರಲ್ಲಿ ಪ್ರಸಾದ ಹಾಕಿ ವೆಂಕಟರಮಣನಿಗೆ ನೀಡಿದ. ವೆಂಕಟರಮಣನಿಗೆ ನೀರು ಬೇಕಿತ್ತು. ಹತ್ತಿರದ ಶಾಸ್ತ್ರಿಗಳೊಬ್ಬರ ಮನೆಯಲ್ಲಿ ನೀರು ಪಡೆಯಲು ಅವನಿಗೆ ಸೂಚಿಸಲಾಯಿತು. ಆ ಮನೆ ಮುಂದೆ ನೀರಿಗಾಗಿ ಕೇಳಿ ಕಾಯುತ್ತಿದ್ದಂತೆ ಅವನಿಗೆ ಎಚ್ಚರದಪ್ಪಿದಂತಾಗಿ ಆ ಮನೆಯ ಮೆಟ್ಟಿಲುಗಳ ಮೇಲೇ ಕುಸಿದು ಬಿದ್ದ. ನಂತರ ಸ್ವಲ್ಪ ಹೊತ್ತಿನ ಮೇಲೆ ಎಚ್ಚರವಾದಾಗ ಸುತ್ತ ಜನ ಸೇರಿದ್ದರು. ವೆಂಕಟರಮಣ ನೆಲದ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಅನ್ನವನ್ನು ಆರಿಸಿ ತಿಂದು ನೀರು ಕುಡಿದ. ಮತ್ತೆ ಅಲ್ಲಿಯೇ ಆ ನೆಲದ ಮೇಲೇ ಬೆಳಗಾಗುವರೆಗೆ ಮಲಗಿ ಬಿಟ್ಟ.

ಮಾರನೆಯ ದಿನ ಎದ್ದಾಗ ತಿರುವಣ್ಣಾಮಲೈಗೆ ಇನ್ನು ನಡೆಯಲಾಗದೆಂದು ವೆಂಕಟರಮಣನಿಗೆ ಅನ್ನಿಸಿತು. ತನ್ನ ಕಿವಿಯಲ್ಲಿದ್ದ ಚಿನ್ನದ ಮುರಗಳನ್ನು ಮಾರಲು ಅವನು ನಿರ್ಧರಿಸಿದ. ಅವನು ಹಾಗೇ ತಿರುಗಾಡುತ್ತಾ ಒಬ್ಬರ ಮನೆಯ ಮುಂದೆ ನಿಂತು ಆಹಾರಕ್ಕಾಗಿ ಬೇಡಿದ. ಅದು ಮುತ್ತುಕೃಷ್ಣನ್ ಭಾಗವತರ್ ಎಂಬುವವರ ಮನೆಯಾಗಿತ್ತು; ಅಂದು ಆಗಸ್ಟ್ ೩೧, ಗೋಕುಲಾಷ್ಟಮಿ ದಿನವಾದ್ದರಿಂದ ಮನೆಯಲ್ಲಿ ಹಬ್ಬದ ಸಿದ್ಧತೆ ನಡೆದಿತ್ತು. ಮೊದಲಿಗೆ ಅವನಿಗೆ ಹಿಂದಿನ ದಿನದ ತಂಗಳು ನೀಡಲಾಯಿತು. ಅದನ್ನು ತಿಂದು ಸುಧಾರಿಸಿಕೊಳ್ಳುವ ಹೊತ್ತಿಗೆ ಮನೆಯೊಡತಿ ಗೋಕುಲಾಷ್ಟಮಿಯ ದಿನ ಮನೆ ಬಾಗಿಲಿಗೆ ಬಂದ ಪ್ರಕಾಶಮಾನ ಕಣ್ಣುಗಳುಳ್ಳ ಈ ಹುಡುಗನ ಬಗ್ಗೆ ಮಮತೆ ಉಕ್ಕಿಬಂತು. ಅವನಿಗೆ ಮಧ್ಯಾಹ್ನದವರೆಗೆ ಕಾಯಲು ಹೇಳಿ, ಕೃಷ್ಣದೇವರಿಗಾಗಿ ತಯಾರಿಸಿದ ಸಿಹಿ ತಿಂಡಿಗಳನ್ನು ಅವನಿಗೆ ಪೊಟ್ಟಣ ಮಾಡಿ ಕಟ್ಟಿಕೊಟ್ಟಳು. ವೆಂಕಟರಮಣ ತಾನು ಯಾತ್ರೆ ಹೊರಟಿದ್ದು ತನ್ನ ಹಾಸಿಗೆ–ಚೀಲಗಳೆಲ್ಲ ಕಳುವಾಗಿದ್ದು, ಮನೆ ಸೇರಲು ಗಾಡಿ ಖರ್ಚಿಗೆ ನಾಲ್ಕು ರೂಪಾಯಿಗಳು ಬೇಕಾಗಿದೆಯೆಂದೂ; ಅದಕ್ಕಾಗಿ ತಮ್ಮ ಚಿನ್ನದ ಮುರಗಳನ್ನು ಅಡವಿಟ್ಟುಕೊಳ್ಳಬೇಕೆಂದೂ ಭಾಗವತರಲ್ಲಿ ಕೋರಿದ. ಭಾಗವತರು ಮುರಗಳನ್ನು ಪರಿಶೀಲಿಸಿ ನಾಲ್ಕು

ರೂಪಾಯಿಗಳನ್ನು ನೀಡಿದರು. ಹಾಗೆ ಒಂದು ಚೀಟಿಯಲ್ಲಿ ತಮ್ಮ ವಿಳಾಸ ಬರೆದುಕೊಟ್ಟು, ಯಾವಾಗ ಬೇಕಾದರೂ ಬಂದು ಹಣ ವಾಪಸ್ ನೀಡಿ ಮುರಗಳನ್ನು ಬಿಡಿಸಿಕೊಂಡು ಹೋಗಬಹುದೆಂದು ಸೂಚಿಸಿದರು.

ಮುರಗಳನ್ನು ಬಿಚ್ಚಿಕೊಟ್ಟು ಹಣ ಪಡೆದ ವೆಂಕಟರಮಣ ಸೀದಾ ರೈಲ್ವೆ ನಿಲ್ದಾಣಕ್ಕೆ ಹೋದ. ದಾರಿಯಲ್ಲಿ ಭಾಗವತರು ಬರೆದುಕೊಟ್ಟಿದ್ದ ವಿಳಾಸ ಚೀಟಿಯನ್ನು ಗಾಳಿಗೆ ತೂರಿಬಿಟ್ಟ. ಮಾರನೆಯ ಬೆಳಿಗ್ಗೆವರೆಗೂ ತಿರುವಣ್ಣಾಮಲೈಗೆ ರೈಲುಗಾಡಿ ಇಲ್ಲವೆಂದು ತಿಳಿದು, ಅಲ್ಲೇ ಮಲಗಿದ. ಬೆಳಗಿನ ರೈಲು ಹತ್ತಿ ತಾನು ಮನೆ ಬಿಟ್ಟ ಮೂರು ದಿನಗಳ ನಂತರ, ಅಂದರೆ ೧೮೯೬ರ ಸೆಪ್ಟೆಂಬರ್ ಒಂದರಂದು ತಿರುವಣ್ಣಾಮಲೈ ತಲುಪಿದ. ತಲುಪಿದೊಡನೆ, ದೂರದಿಂದಲೇ ಎದ್ದು ಕಾಣುತ್ತಿದ್ದ ಅರುಣಾಚಲೇಶ್ವರ ದೇವಸ್ಥಾನದ ಬೃಹತ್ ಗೋಪುರಗಳ ದರ್ಶನದಿಂದ ಪುಳಕಿತನಾಗಿ ದೇವಸ್ಥಾನದೆಡೆಗೆ ಓಡಿದ. ಆತನಿಗಾಗಿಯೋ ಎಂಬಂತೆ ದೇವಸ್ಥಾನದ ಹೆಬ್ಬಾಗಿಲು ಸೇರಿದಂತೆ, ಎಲ್ಲ ಬಾಗಿಲುಗಳೂ ತೆರೆದಿದ್ದವು. ವೆಂಕಟರಮಣ ನೇರವಾಗಿ ಗರ್ಭಗುಡಿಯತ್ತ ಸಾಗಿದ. ಗರ್ಭಗುಡಿಯ ಬಾಗಿಲು ತೆರೆದಿತ್ತು. ಅಲ್ಲಿ ಯಾರೊಬ್ಬರ ಸುಳಿವೂ ಇರಲಿಲ್ಲ. ವೆಂಕಟರಮಣನಿಗೆ ತನ್ನ ನಿಜ ತಂದೆಯೊಡನೆ ಏಕಾಂತ ಭೇಟಿಯ ದಿವ್ಯ ಅವಕಾಶ ಒದಗಿಬಂದಿತ್ತು. ತುಂಬಿದ ಹೃದಯದೊಂದಿಗೆ, ಮಂಜಾದ ಕಣ್ಣುಗಳೊಂದಿಗೆ ಅವನು ತನ್ನ ತಂದೆಯ ಮುಂದೆ ಕೈ ಮುಗಿದು ನಿಂತು ಬಿಟ್ಟ. ಹುಡುಕಾಟದ ತಹತಹ ಒಂದು ಸ್ಥಿಮಿತಕ್ಕೆ ಬಂದಿತ್ತು.

–೪–

ತಂದೆ ಅರುಣಾಚಲೇಶ್ವನನ್ನು ಮನಸಾರೆ ನೋಡಿ ತೃಪ್ತಿಯಾದ ನಂತರ ವೆಂಕಟರಮಣ ದೇವಸ್ಥಾನದ ವಿಶಾಲ ಪ್ರಾಂಗಣಕ್ಕೆ ಬಂದು ಸುತ್ತಾಡಿದ. ಕ್ಷೌರಿಕನೊಬ್ಬ ಬಂದು ಜುಟ್ಟು ಕತ್ತರಿಸಬೇಕೇ ಎಂದು ಕೇಳಿದ. ಜುಟ್ಟು ಕತ್ತರಿಸಿಕೊಂಡ ವೆಂಕಟರಮಣ, ಹತ್ತಿರದ *ಅಯ್ಯಂಕುಲಂ* ಕೊಳದೆಡೆಗೆ ಹೋದ. ಅಲ್ಲಿ ಮತ್ತೆ ಕ್ಷೌರಿಕರು ಅವನ ತಲೆ ಬೋಳಿಸಲು ಮುಂದೆ ಬಂದರು. ವೆಂಕಟರಮಣ ತಲೆಯೊಡ್ಡಿದ. ಭಾಗವತರ ಪತ್ನಿ ಕಟ್ಟಿಕೊಟ್ಟಿದ್ದ ಪೊಟ್ಟಣವನ್ನು, ಈ ದೇಹಕ್ಕೇಕೆ ಸಿಹಿ ತಿಂಡಿಯ ವೈಭೋಗವೆಂದು ಅದನ್ನು ಕೊಳಕ್ಕೆ ಎಸೆದ. ನಂತರ ಜಾತಿ ಸೂಚಕವಾಗಿದ್ದ ಜನಿವಾರವನ್ನೂ ತೆಗೆದು ಬಿಸಾಡಿ ಜಾತಿ ಬಂಧನದಿಂದ ಬಿಡುಗಡೆ ಪಡೆದ. ಆನಂತರ ತನ್ನಲ್ಲಿ ಉಳಿದಿದ್ದ ಮೂರೂ ಚಿಲ್ಲರೆ ರೂಪಾಯಿ ಹಣವನ್ನೂ ಕೊಳಕ್ಕೆ ಎಸೆದ. ತೊಟ್ಟಿದ್ದ ಅಂಗಿ ಮತ್ತು ಧೋತಿಯನ್ನು, ಕೌಪೀನಕ್ಕಷ್ಟೇ ಬಟ್ಟೆ ಹರಿದುಕೊಂಡ ನಂತರ ಬಿಸಾಡಿದ. ಕೌಪೀನ ಧಾರಿಯಾಗಿ ದೇವಾಲಯದ ಸಾವಿರ ಕಂಭಗಳ ಪ್ರಾಂಗಣದ ಬಳಿ

ಬರುವ ಹೊತ್ತಿಗೆ ಮಳೆ ಆರಂಭವಾಯಿತು. ಅದು ಅವನ ಇಡೀ ದೇಹವನ್ನು ತೊಳೆಯಿತು. ಹದಿನೇಳರ ಹರೆಯದ ವೆಂಕಟರಮಣ ಅಲ್ಲೇ ಆ ಪ್ರಾಂಗಣದಲ್ಲೇ ಧ್ಯಾನಸ್ಥನಾಗಿ ಕೂತ.

ಅಂದಿನಿಂದ ಮುಂದಿನ ಸತತ ಮೂರು ವರ್ಷಗಳ ಕಾಲ ವೆಂಕಟರಮಣ ಆಳವಾದ ಧ್ಯಾನದಲ್ಲಿ ಮುಳುಗಿದ. ಈ ಮೂರು ವರ್ಷಗಳಲ್ಲಿ ಈ ಬಾಲಯೋಗಿ ಹಲವಾರು ಭಕ್ತರನ್ನು ಆಕರ್ಷಿಸಿದ. ಹಾಗೇ, ಅವರ ಉಸಾಬರಿಯಿಂದಾಗಿ ಆತ ಹಲವು ಬಾರಿ ಸ್ಥಳಗಳನ್ನು ಬದಲಾಯಿಸಬೇಕಾಯಿತು. ಏಕೆಂದರೆ ಸಾವಿರ ಕಂಭಗಳ ಪ್ರಾಂಗಣದಲ್ಲಿ ಧ್ಯಾನಕ್ಕೆ ಕೂತ ವೆಂಕಟರಮಣನತ್ತ ಆ ಪ್ರಾಂಗಣದಲ್ಲಿ ಸುತ್ತಾಡುತ್ತಿದ್ದ ಪುಂಡು ಹುಡುಗರು ಚೇಷ್ಟೆಗೆ ಕಲ್ಲೆಸೆಯತೊಡಗಿದರು. ಆದರೆ ಈ ಬಾಲಯೋಗಿಯನ್ನು ನೋಡಿ ಕುತೂಹಲಗೊಂಡಿದ್ದ ಆ ಊರಿನಲ್ಲಿ ಆ ಹೊತ್ತಿಗಾಗಲೇ ಸ್ಥಾಪಿತವಾಗಿದ್ದ ಶೇಷಾದ್ರಿ ಸ್ವಾಮಿಗಳೆಂಬ ಸಿದ್ಧಪುರುಷರು ಇದನ್ನು ತಡೆಯಲು ಯತ್ನಿಸಿದರು. ಆದರೆ ಅದರಲ್ಲಿ ಸಫಲರಾಗಲಿಲ್ಲ. ಆಗ ವೆಂಕಟರಮಣ ದೇವಸ್ಥಾನದ ಒಂದು ತುದಿಯಲ್ಲಿ ಅಯ್ಯಂಕುಲಂ ಕೊಳಕ್ಕೆ ತಾಗಿದಂತಿದ್ದ *ಪಾತಳಲಿಂಗಂ* ಎಂಬ ನೆಲಮಾಳಿಗೆಯ ಹಾಳು ಮಂಪಟಕ್ಕೆ ತನ್ನ ಧ್ಯಾನ ಸ್ಥಳವನ್ನು ಬದಲಾಯಿಸಿದ. ಸಣ್ಣ ಸುರಂಗವೊಂದರ ಮೂಲಕ ಮಾತ್ರ ಪ್ರವೇಶಿಸಬಹುದಾಗಿದ್ದ ಕತ್ತಲೆ ತುಂಬಿದ ಆ ಜೌಗು ಮಂಟಪದಲ್ಲಿ ಬಹಳ ಕಾಲ ಜನ ಪ್ರವೇಶವಿಲ್ಲದ್ದರಿಂದಾಗಿ ಸೊಳ್ಳೆ, ಹುಳು-ಹುಪ್ಪಡಿಗಳು ತುಂಬಿದ್ದವು. ಆದರೆ ಇದಾವುದರಿಂದಲೂ ವಿಚಲಿತನಾಗದೆ ಬಾಲಕ ವೆಂಕಟರಮಣ, ಅಲ್ಲಿ ತಪಸ್ಸಿನಲ್ಲಿ ನಿರತನಾದ.

ಶೇಷಾದ್ರಿಸ್ವಾಮಿಗಳು ಇದನ್ನು ಗಮನಿಸಿದರು. ಅವರಿಂದ ಇದನ್ನು ತಿಳಿದ ಕೆಲವು ಭಕ್ತರು ಆಗಾಗ್ಗೆ ಪಾತಾಳಲಿಂಗಂ ಪ್ರವೇಶದಲ್ಲಿ ಆಹಾರವನ್ನಿಟ್ಟು ಬರುತ್ತಿದ್ದರು. ಧ್ಯಾನದಿಂದ ಎಚ್ಚರವಾದಾಗ ಬಾಲಕ ಆ ಆಹಾರವನ್ನು ಸೇವಿಸುತ್ತಿದ್ದ. ಆದರೆ ತಿಂಗಳುಗಟ್ಟಲೆ ಆತ ಹೊರಗೇ ಬರದಿದ್ದಾಗ ಭಕ್ತಿ-ಕುತೂಹಲಗಳಿಂದ ಕೆಲವು ಭಕ್ತರು ಆ ಹಾಳುಮಂಟಪದ ಒಳಹೊಕ್ಕು ನೋಡಿದರು. ಆಗ ವೆಂಕಟರಮಣ ಗಾಢ ಧ್ಯಾನದಲ್ಲಿದ್ದು, ಅವನ ತೊಡೆಗಳನ್ನು ಹುಳು ಹುಪ್ಪಡಿಗಳು ಕಚ್ಚಿ ರಕ್ತ ಒಸರುತಿದ್ದುದು ಕಂಡು ಬಂತು. ಆತನನ್ನು ಮೇಲಕ್ಕೆತ್ತಿದ್ದಾಗ ತೊಡೆಗಳು ನೆಲಕ್ಕಂಟಿಕೊಂಡು ಚರ್ಮವೇ ಕಿತ್ತು ಬರವಂತಾಯಿತು. ಧ್ಯಾನಾವಸ್ಥೆಯಲ್ಲೇ ಇದ್ದ ಬಾಲಯೋಗಿಯನ್ನು ಎತ್ತಿ ಹೊರ ತಂದು ಸುಬ್ರಹ್ಮಣ್ಯ ಗುಡಿಯ ಆವರಣದಲ್ಲಿ ಕೂರಿಸಲಾಯಿತು. ಆತ ಹಲವು ದಿನಗಳ ಕಾಲ ಅಲ್ಲಿಯೇ ಕೌಪೀನದ ಪರಿವೆಯೂ ಇಲ್ಲದೆ ಆತ್ಮ ಸಾಮ್ರಾಜ್ಯದಲ್ಲಿ ಮುಳುಗಿ ಹೋಗಿದ್ದ. ಹೊರಗಿನ ಜನ ಜೀವನದ

ಅಥವಾ ಹಗಲು-ರಾತ್ರಿಗಳ ಪರಿವೆಯೇ ಇಲ್ಲದೆ ಗಾಢ ಧ್ಯಾನದಲ್ಲಿದ್ದ ಈತನನ್ನು ಜನ 'ಬ್ರಾಹ್ಮಣ ಸ್ವಾಮಿ' ಎಂದು ಗೌರವದಿಂದ ಕರೆಯಲಾರಂಭಿಸಿದರು.

ಇದು ಊರ ತುಂಬ ಸುದ್ದಿಯಾಗಿ ಹರಡಿ ಸಾಮಾನ್ಯ ಜನರ ಕುತೂಹಲ ಮತ್ತು ಭಕ್ತರ ಕಾಟ ಶುರುವಾಯಿತು. ಇದು ಮೇರೆ ಮೀರತೊಡಗಿದಾಗ. ಇದನ್ನು ಗಮನಿಸಿದ 'ಬ್ರಾಹ್ಮಣ ಸ್ವಾಮಿ'ಯ ಹಿತೈಷಿಗಳು ಅವರನ್ನು ಊರ ಹೊರಗಿನ ಬೇರೆ ಬೇರೆ ಸ್ಥಳಗಳಿಗೆ ವರ್ಗಾಯಿಸಿದರು. ಹೀಗೆ ಅವರನ್ನು ಸೇವಿಸುತ್ತಾ, ಬೇರೆ ಬೇರೆ ಸ್ಥಳಗಳಲ್ಲಿ ಕಾಯುವರಲ್ಲಿ ಉದ್ದಂಡಿ ನಯನಾರ್, ಅಣ್ಣಾಮಲೈ ತಂಬೀರನ್ ಮತ್ತು ಪಳನಿಸ್ವಾಮಿ ಮುಖ್ಯರು. ನಿಯಮಿತ ಅನ್ನಾಹಾರಗಳಾಗಲೀ, ಸ್ನಾನ ಕ್ಷೌರಗಳಾಗಲೀ ಇಲ್ಲದೆ ಕೃಶವಾಗಿ, ಕೊಳಕಾಗಿ ವಿಚಿತ್ರ ಸ್ಥಿತಿಯಲ್ಲಿದ್ದ 'ಬ್ರಾಹ್ಮಣ ಸ್ವಾಮಿ'ಯನ್ನು ಇವರು ಒಬ್ಬರಾದ ಮೇಲೆ ಒಬ್ಬರಂತೆ ಕಾಯ್ದು ರಕ್ಷಿಸಿದರು. ಇವರೆಲ್ಲರೂ ಪರಮ ದೈವಭಕ್ತರಾಗಿದ್ದು, ಈ 'ಬ್ರಾಹ್ಮಣ ಸ್ವಾಮಿ'ಯನ್ನೇ ದೈವ ಸ್ವರೂಪವೆಂದು ಭಾವಿಸಿ ಅವರ ಸೇವೆ ಗೈದರು. ಇವರಲ್ಲಿ ಮಧ್ಯದವನಾದ ಅಣ್ಣಾಮಲೈನ ಈ ಪರಮಭಕ್ತಿಯೇ ಕಾರಣವಾಗಿ ಬ್ರಾಹ್ಮಣ ಸ್ವಾಮಿಯ ಜೀವನ ವಿವರಗಳು ಒಂದೊಂದಾಗಿ ಗೊತ್ತಾಗತೊಡಗಿದವು.

ಒಂದು ದಿನ ಅಣ್ಣಾಮಲೈ ತನ್ನ 'ಬ್ರಾಹ್ಮಣ ಸ್ವಾಮಿ'ಯನ್ನು ದೇವರಿಗೆ ಮಾಡುವಂತೆ ಹೂ ಹಣ್ಣುಗಳಿಂದ ಸಿಂಗರಿಸಿ ಭಕ್ತಿಯಿಂದ ಕರ್ಪೂರದಾರತಿ ಮಾಡಿದ. ಇದು ಅನಿರೀಕ್ಷಿತವಾದುದರಿಂದ ಆ ದಿನದ ಮಟ್ಟಿಗೆ ಇದನ್ನು ಅನಿವಾರ್ಯವಾಗಿ ಸ್ವಾಮಿ ಅನುಭವಿಸಲೇಬೇಕಾಯಿತು. ಆದರೆ ಮುಂದಿನ ದಿನ ಅಣ್ಣಾಮಲೈ ಆಹಾರ ತರುತ್ತಿದ್ದಂತೆ ಸ್ವಾಮಿ ಎದುರಿನ ಗೋಡೆಯ ಮೇಲೆ ಆಹಾರ ಸೇವೆ ಮಾತ್ರ ಸಾಕು ಎಂಬರ್ಥದಲ್ಲಿ, 'ಇದಕ್ಕೆ ಇಷ್ಟು ಸೇವೆ ಸಾಕು' ಎಂದು ತಮಿಳಿನಲ್ಲಿ ಬರೆದರು. ಇದನ್ನು ಕಂಡು ಆತ, ಮಾತೇ ಬರದೆಂದು ತಿಳಿದಿದ್ದ ತನ್ನ ಸ್ವಾಮಿಗೆ ಓದು ಬರಹ ಬರುವುದೆಂದು ಚಕಿತನಾದ. ಇದನ್ನು ಎಲ್ಲ ಕಡೆ ಹೇಳಿಕೊಂಡು ಬಂದ. ಇದರ ಪರಿಣಾಮವಾಗಿ, ಬ್ರಾಹ್ಮಣ ಸ್ವಾಮಿಯ ಬಗ್ಗೆ ಕುತೂಹಲಗೊಂಡಿದ್ದ ವೆಂಕಟರಾಮ ಅಯ್ಯರ್ ಎಂಬ ಭಕ್ತರೊಬ್ಬರು ಸ್ವಾಮಿಯ ಪೂರ್ವಾಪರಗಳನ್ನು ತಿಳಿಯುವ ಪ್ರಯತ್ನ ಮಾಡಿದರಾದರೂ ಅದರಲ್ಲಿ ವಿಫಲರಾದರು. ಆದರೆ ಕೊನೆಗೆ ಅನ್ನಾಹಾರಗಳನ್ನು ತ್ಯಜಿಸುವುದಾಗಿ ಹಠ ಹಿಡಿದು, ಸ್ವಾಮಿಗಳಿಂದ *ವೆಂಕಟರಮಣ, ತಿರುಚ್ಚುಳಿ* ಎಂದು ಅವರ ಹೆಸರು, ಊರುಗಳನ್ನು ಒಂದು ಹಾಳೆಯ ಮೇಲೆ ಬರೆಸುವುದರಲ್ಲಿ ಸಫಲರಾದರು. ಆ ಇಂಗ್ಲೀಷ್ ಬರಹವನ್ನು ನೋಡಿ ಚಕಿತರಾದ ಆ ಹಿರಿಯರು, 'ಬ್ರಾಹ್ಮಣ ಸ್ವಾಮಿ'ಯ ಈ ವಿವರಗಳನ್ನು ಸಂಭ್ರಮದಿಂದ ಎಲ್ಲ ಕಡೆ ಹರಡಿದರು.

ಇದು ಹೇಗೋ, ಆಗ ಮನ-ಮಧುರೈ ಎಂಬಲ್ಲಿದ್ದ ವೆಂಕಟರಮಣರ ಪೂರ್ವ ಕುಟುಂಬದವರಿಗೆ ತಲುಪಿತು. ಒಂದು ದಿಸ ನೆಲ್ಲಿಯಪ್ಪ ಅಯ್ಯರ್ ಎಂಬ ಅವರ ಒಬ್ಬ ಚಿಕ್ಕಪ್ಪನೂ, ನಂತರ ಅವರ ತಾಯಿ ಅಳಗಮ್ಮ ಮತ್ತು ಅಣ್ಣ ನಾಗಸ್ವಾಮಿಯೂ ಬ್ರಾಹ್ಮಣ ಸ್ವಾಮಿ ಇದ್ದೆಡೆಗೆ ಬಂದರು. ಅವರನ್ನು ಊರಿಗೆ ಕರೆದೊಯ್ಯಲು ಸರ್ವ ಪ್ರಯತ್ನಗಳನ್ನು ಮಾಡಿದರು. ಆದರೆ ಸರ್ವ ಬಂಧನಗಳಿಂದಲೂ ಮುಕ್ತರಾಗಿದ್ದ ಬ್ರಾಹ್ಮಣ ಸ್ವಾಮಿ ಅವಿಚಲಿತರಾಗಿ ಅವರಿಬ್ಬರಿಗೂ ಹೇಳಿದ ಬೀಜಮಾತು ಎಂದರೆ, 'ಎಲ್ಲ ನಿಯಮದಂತೆ ನಡೆಯುತ್ತದೆ;ಆಗಬೇಕಾದದ್ದು ಆಗಿಯೇ ತೀರುತ್ತದೆ. ಅದನ್ನು ಯಾರೂ ಬದಲಿಸಲಾರರು. ಸುಮ್ಮನಿರುವುದೇ ಸರ್ವೋತ್ತಮ ಮಾರ್ಗ...'

ಇದು ಮೂರು ವರ್ಷಗಳ ಮೌನದಲ್ಲಿ ಮತ್ತು ದೀರ್ಘ ತಪಸ್ಸಿನಲ್ಲಿ ವೆಂಕಟರಮಣರು ಕಂಡುಕೊಂಡಿದ್ದ ಆಳದ, ಆತ್ಯಂತಿಕ ಸತ್ಯ.

-ಶ್ರೀ-

ತಾಯಿ ಅಳಗಮ್ಮ ಬಂದು ಹೋದ ನಂತರ ಬ್ರಾಹ್ಮಣಸ್ವಾಮಿ ತಮ್ಮ ಜಾಗವನ್ನು ಅರುಣಾಚಲ ಬೆಟ್ಟದ ಮೇಲಿನ ವಿರೂಪಾಕ್ಷ ಗುಹೆಗೆ ಬದಲಾಯಿಸಿದರು. ಆ ಗುಹೆ ಕನ್ನಡ ನಾಡಿನ(ಹಂಪಿಯ) ವಿರೂಪಾಕ್ಷ ಸ್ವಾಮಿ ಎಂಬ ಯೋಗಿ ತಪಸ್ಸು ಮಾಡಿದ ಗುಹೆ ಎಂಬ ಪ್ರತೀತಿ ಇದೆ. ಇಲ್ಲಿ ವಾಸ ಆರಂಭವಾದ ನಂತರ ಶಿವಸ್ವರೂಪಿಯೆಂದೇ ಹೆಸರಾದ ಆ ತಮ್ಮ ನೆಚ್ಚಿನ ಬೆಟ್ಟವನ್ನೇ ಅವರು ತಮ್ಮ ಶಾಶ್ವತ ವಾಸ ಸ್ಥಾನವನ್ನಾಗಿ ಮಾಡಿಕೊಂಡರು. ಬಹುಶಃ ಅವರ ತಪಶ್ಚರ್ಯೆಯ ಕಾಲ ಮುಗಿದಿತ್ತು. ಹಾಗೇ ಸಂಪೂರ್ಣ ಮೌನಾಚರಣೆಯ ಕಾಲ ಕೂಡಾ. ಹಾಗಾಗಿ ಈಗ ಅವರೇ ತಮ್ಮ ಪಾಲಿನ ಆಹಾರಕ್ಕಾಗಿ ಊರೊಳಕ್ಕೆ ಭಿಕ್ಷಾಟನೆಗೆ ಹೋಗತೊಡಗಿದರು. ದಿನಕ್ಕೊಮ್ಮೆ ಒಂದು ಮನೆಯ ಮುಂದೆ ಮಾತ್ರ ಚಪ್ಪಾಳೆ ತಟ್ಟಿ ಬೊಗಸೆಯಲ್ಲಿ ಆಹಾರ ಪಡೆಯುತ್ತಿದ್ದರು.

ಈ ವೇಳೆಗೆ ಸಂನ್ಯಾಸಿಯ ಸಂಪೂರ್ಣ ವೈರಾಗ್ಯ ಹಾಗೂ ಸರಳತೆಗಳಿಗೆ ಮಾರು ಹೋಗಿದ್ದ ಜನ ಈಗ ಬೆಟ್ಟ ಹತ್ತಿ ಬಂದು ಅವರಿಂದ ಆಧ್ಯಾತ್ಮಿಕ ಶಿಕ್ಷಣ ಪಡೆಯ ಬಯಸಿದರು. ಶ್ರದ್ಧೆಯಿಂದ ಬಂದು ಪ್ರಶ್ನೆಗಳನ್ನು ಕೇಳಿದವರಿಗೆ ಸಂನ್ಯಾಸಿ ಸಣ್ಣಪುಟ್ಟ ಚೀಟಿಗಳಲ್ಲಿ ಸಂಕ್ಷಿಪ್ತ ಉತ್ತರಗಳನ್ನು ಬರೆದು ನೀಡುತ್ತಿದ್ದರು. ಗಂಭೀರಂ ಶೇಷಯ್ಯ ಮತ್ತು ಶಿವಪ್ರಕಾಶಂ ಪಿಳ್ಳೈ ಎಂಬ ಇಬ್ಬರು ಸದ್ಭಕ್ತರು ಈ ಚೀಟಿಗಳನ್ನು ಸಂಗ್ರಹಿಸಿ, ಕಾಪಿಟ್ಟುಕೊಂಡು ಅದನ್ನು 'ಆತ್ಮ ವಿಚಾರ' ಹಾಗೂ 'ನಾನು ಯಾರು?'

ಎಂಬ ಶೀರ್ಷಿಕೆಗಳಲ್ಲಿ ಕಿರು ಪುಸ್ತಕಗಳನ್ನಾಗಿ ಪ್ರಕಟಿಸಿದರು. ಇವು ಈವರೆಗೆ ಜಗತ್ತಿನ ಎಲ್ಲ ಪ್ರಮುಖ ಭಾಷೆಗಳಲ್ಲಿ ಲಕ್ಷಾಂತರ ಪ್ರತಿಗಳಲ್ಲಿ ಪ್ರಕಟವಾಗಿ ಜನರ ಗಮನ ಸೆಳೆದಿವೆ.

ಮನಸ್ಸನ್ನು ಶಾಂತಗೊಳಿಸಿಕೊಳ್ಳುವುದೇ ಮೋಕ್ಷ ಅಥವಾ ನಿರ್ವಾಣ. 'ನಾನು ಯಾರು?' ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮೂಲಕ ಮಾತ್ರ ಮನಸ್ಸನ್ನು ಶಾಂತಗೊಳಿಸಿಕೊಳ್ಳಬಹುದು. ನಾನು ಎಂಬ ಭಾವೋತ್ಪತ್ತಿಯೇ ಮನಸ್ಸಿನ ಮೂಲ. ಎಲ್ಲ ಆಲೋಚನೆಗಳಿಗೂ ಅದೇ ಕೇಂದ್ರ. ಮನಸ್ಸು ಮತ್ತು ಅಹಂಕಾರ ಎಂಬುದು ಒಂದೇ, ಬೇರೆಯಲ್ಲ. ಹಾಗಾಗಿ ಈ ನಾನು ಎಂಬುದು ಎಲ್ಲಿ, ಏಕೆ ಉತ್ಪತ್ತಿಯಾಗುತ್ತದೆ ಎಂಬುದನ್ನು 'ನಾನು ಯಾರು?' ಎಂಬ ಪ್ರಶ್ನೆಯ ಮೇಲೆ ವಿಚಾರ ಮಾಡುವ ಮೂಲಕ ಕಂಡುಕೋ. ಆಗ ನಾನು ಎಂಬುದೇ ಇಲ್ಲ;ಇರುವುದು ಶುದ್ಧ ಅರಿವು ಮಾತ್ರ. ಈ ಅರಿವೇ ಜಗತ್ತಾಗಿ ಅರಳಿ ಕಾಣುತ್ತಿರುವುದು. ನಾನು ಎಂಬುದರ ಉದಯದಿಂದ ದೇಹಭಾವ ಉಂಟಾಗಿ ಜಗತ್ತು ತನ್ನಿಂದ(ಅಂದರೆ ದೇಹದಿಂದ) ಹೊರಗಿದ್ದಂತೆ, ಬೇರೆಯಾಗಿ ಕಾಣುವುದು. ಇದೇ ಜಗತ್ತಿನ ಎಲ್ಲ ಸಮಸ್ಯೆಗಳ ಮೂಲ.

–ಇದು ಸಂಕ್ಷಿಪ್ತವಾಗಿ ಮತ್ತು ಸ್ಥೂಲವಾಗಿ ಈ ಕಿರು ಪುಸ್ತಕಗಳ ಸಾರ. ವೆಂಕಟರಮಣ 'ಬ್ರಾಹ್ಮಣ ಸ್ವಾಮಿ' ಎನಿಸಿ ಈ ಸತ್ಯವನ್ನು ಕಂಡುಕೊಂಡು ಅದರಲ್ಲೇ ಮುಳುಗಿರುತ್ತಿದ್ದರು. ಆ ಅನುಭವವನ್ನು ಅವರು ಆತ್ಮಾನುಭವ ಎಂದು ಕರೆದರು. ಈ ಬ್ರಾಹ್ಮಣ ಸ್ವಾಮಿ ಸದಾ ಇಂತಹ ಆತ್ಮನಿಷ್ಠೆಯಲ್ಲಿರುತ್ತಾ ಜಗತ್ತಿನೊಂದಿಗೆ ಸರ್ವ ಸಮತೆಯಲ್ಲಿರುತ್ತಿದ್ದರು. ಆದುದರಿಂದ ಅವರ ಬಳಿಗೆ ಬಂದ ಜನ ಆಳದ ಶಾಂತಿಯನ್ನು ಅನುಭವಿಸುತ್ತಿದ್ದರು. ಬೆಟ್ಟದ ಮೇಲೆ ಕುರಿ ಕಾಯುವವರು, ದನ ಮೇಯಿಸುವವರು ಮತ್ತು ಹುಲ್ಲು ಕೀಳಲು ಬರುವವರೂ ಸೇರಿದಂತೆ ಎಲ್ಲ ಸ್ತರಗಳ ಮತ್ತು ವಯಸ್ಸಿನ ಜನ ಅವರ ಮುಂದೆ ತಮ್ಮ ಎಲ್ಲ ಚಿಂತೆ–ಚೇಷ್ಟೆಗಳನ್ನು ಮರೆತು ಶಾಂತಚಿತ್ತರಾಗಿ ಕೂರುತ್ತಿದ್ದರು. ಹೀಗೆ ಈ ಸಂನ್ಯಾಸಿಯು ಸಾನ್ನಿಧ್ಯದಲ್ಲಿ ಶಾಂತಿ ಬಯಸಿ ಬಂದ ಮಹಿಳಾ ಭಕ್ತರಲ್ಲಿ ಎಚ್ಚೆಮ್ಮಾಳ್ ಎಂಬಾಕೆ ಮುಖ್ಯಳು. ಈ ಹೆಂಗಸು ಚಿಕ್ಕ ವಯಸ್ಸಿನಲ್ಲಿಯೇ ಗಂಡ ಮತ್ತು ಮಕ್ಕಳನ್ನು ಕಳೆದುಕೊಂಡು ಮಾನಸಿಕವಾಗಿ ಜರ್ಝರಿತಳಾಗಿದ್ದಳು. ಆತ್ಮದ ಅರಿವಿನ ನೆಲೆಯಲ್ಲಿ ಹುಟ್ಟು–ಸಾವು, ಬದುಕುಗಳು ಹೇಗೆ ಬರೀ ಕನಸುಗಳ ಮಾತ್ರ ಎಂಬುದನ್ನು ಈ



ಬಾಲಕ ರಮಣ



ಯುವಕ ರಮಣರು



ಅರುಣಾಚಲ ಬೆಟ್ಟದ ಮೇಲೆ ರಮಣರು




ಆಶ್ರಮದ ಹಸು ಲಕ್ಷ್ಮಿಯೊಂದಿಗೆ ರಮಣರು



ಆಶ್ರಮದಲ್ಲಿ ಸುಖಾಸೀನರಾದ ರಮಣರು



ತಮ್ಮ ಸ್ಥಳೀಯ ಮತ್ತು ವಿದೇಶಿ ಭಕ್ತರೊಂದಿಗೆ ರಮಣರು



ಅರುಣಾಚಲೇಶ್ವರ ದೇವಸ್ಥಾನದ ಹಿನ್ನೆಲೆಯಲ್ಲಿ ಅರುಣಾಚಲ ಬೆಟ್ಟ



ಶ್ರೀ ರಮಣಾಶ್ರಮದ ಹೊರನೋಟ



ಶ್ರೀ ರಮಣಾಶ್ರಮದ ಸಮಾಧಿ ಮಂದಿರದಲ್ಲಿ ಭಕ್ತರು



ಆಶ್ರಮದಲ್ಲಿ ಧ್ಯಾನಸ್ಥಳಾದ ಓರ್ವ ಭಕ್ತೆ



ಆಶ್ರಮದ ಮುಂದೆ ಓರ್ವ ಸಾಧು

ಸಂನ್ಯಾಸಿಯಿಂದ ಅರಿತ ಆಕೆ ಶಾಂತಚಿತ್ತಳಾದಳು. ೧೯೦೭ರಲ್ಲಿ ಈ ಸಂನ್ಯಾಸಿಯನ್ನು ಕಂಡಾಗಿನಿಂದ ಈ ಎಚ್ಚಮ್ಮಾಳ್ ದಿನವೂ ತನ್ನ ಮನೆಯಿಂದ ಆಹಾರ ಸಿದ್ಧಪಡಿಸಿ ತಂದು ಅವರಿಗೆ ಬಡಿಸುವ ಸೇವೆಗೈದಳು. ಅದು ಆಕೆ ೧೯೪೫ರಲ್ಲಿ ದೇಹತ್ಯಾಗ ಮಾಡುವವರೆಗೂ ಮುಂದುವರೆಯಿತು.

ಅದು ೨೦ನೇ ಶತಮಾನದ ಆರಂಭದ ದಶಕ. ರಾಷ್ಟ್ರೀಯ ಹೋರಾಟ ಗರಿಗಟ್ಟುತ್ತಿದ್ದ ಸಂದರ್ಭ. ಹಾಗಾಗಿ ತಮ್ಮ ಹೋರಾಟಕ್ಕೆ ಶುಭಾಶಯಗಳನ್ನೋ, ಆಶೀರ್ವಾದಗಳನ್ನೋ ಬಯಸಿ ಅಥವಾ ಆ ಬಗ್ಗೆ ಸಂದೇಹಗಳನ್ನು ಪರಿಹರಿಸಿಕೊಳ್ಳಲು ಅನೇಕ ಜನ ಈ ಸಂನ್ಯಾಸಿಯ ಬಳಿ ಬರುತ್ತಿದ್ದರು. ಹಾಗೆ ಮೊದಲು ಬಂದವರು ೧೯೦೭ರಲ್ಲಿ ಮಹಾನ್ ಸಂಸ್ಕೃತ ವಿದ್ವಾಂಸರೂ, ವೇದಪಾರಂಗತರೂ, ಆಶುಕವಿಯೂ ಆಗಿದ್ದ ಆಂಧ್ರದ ಕಾವ್ಯಕಂಠ ಗಣಪತಿ ಮುನಿಗಳು. ಏನೆಲ್ಲ ಓದಿದರೂ, ಎಷ್ಟೆಲ್ಲ ಜಪ ಮಾಡಿದರೂ ಪ್ರಶ್ನೆಗಳೂ, ಸಂದೇಹಗಳೂ ನಿಲ್ಲದೆ ಅವರ ಮನಸ್ಸು ಅಶಾಂತವಾಗಿಯೇ ಇತ್ತು. ಈ ಸ್ಥಿತಿಯಲ್ಲಿ ಅವರು ನೆಮ್ಮದಿಯನ್ನರಸಿ ದೇಶಪರ್ಯಟನೆ ಮಾಡುತ್ತಾ ತಿರುವಣ್ಣಾಮಲೈಗೆ ಬಂದರು. ಅಲ್ಲಿ ಬೆಟ್ಟದ ಮೇಲಿನ ಅಪೂರ್ವ ಸಂನ್ಯಾಸಿಯ ಬಗ್ಗೆ ಕೇಳಿ, ಮಧ್ಯಾಹ್ನದ ಉರಿ ಬಿಸಿಲಿನಲ್ಲಿ ಬೆಟ್ಟ ಹತ್ತಿ ಬಂದರು. ಬಂದವರೇ ಅವರ ಮುಂದೆ 'ನಾನು ವೇದಾಂತವೆಲ್ಲವನ್ನೂ ಅರೆದು ಕುಡಿದಿರುವೆ. ಮನದುಂಬಿ ಜಪ ಮಾಡಿರುವೆ. ಆದರೆ ಹೃದಯಕ್ಕೆ ತೃಪ್ತಿಯಾಗಿಲ್ಲ. ತಪಸ್ಸಿನ ಅರ್ಥ ಗೊತ್ತಾಗಲಿಲ್ಲ. ಹಾಗಾಗಿ ನಮ್ಮ ಚರಣಗಳಲ್ಲಿ ಆಶ್ರಯ ಬೇಡುತ್ತಿರುವೆ' ಎಂದು ಅಡ್ಡಬಿದ್ದರು. ಸಂನ್ಯಾಸಿ ಕೆಲ ಕಾಲ ಮೌನವಾಗಿ ಅವರ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡಿದರು. ನಂತರ,

> **'ಈ ನಾನು ಎಂಬ ಭಾವನೆಯು ಎಲ್ಲಿಂದ ಹುಟ್ಟಿ ಬರುತ್ತದೆ ಎಂಬುದನ್ನು ಗಮನಿಸಿ; ಆ ಸಂಗತಿಯನ್ನು ಮನಸ್ಸಿನಲ್ಲಿಯೇ ವಿಚಾರದಿಂದ ಪರಿಶೀಲಿಸಿದರೆ, ಮನಸ್ಸು ಅದರಲ್ಲಿಯೇ ಲೀನವಾಗುವುದು. ಅದೇ ತಪಸ್ಸು. ಮಂತ್ರ ಜಪವನ್ನು ಮಾಡುವಾಗ ಮಂತ್ರ ನಾದವು ಎಲ್ಲಿಂದ ಹುಟ್ಟುತ್ತದೆ ಎಂಬುದನ್ನು ಗಮನಿಸಿದರೆ ಅದೇ ಮನಸ್ಸು ಅದರಲ್ಲಿ ಲೀನವಾಗುವುದು. ಅದೇ ತಪಸ್ಸು...'**

ಎಂದರು. ಇದರಿಂದ ಗಣಪತಿ ಮುನಿಗಳ ಮನಸ್ಸೊಳಗೆ ಝಗ್ಗನೆ ಹೊಸ ಬೆಳಕು ಮೂಡಿದ ಅನುಭವವಾಯಿತು; ತೃಪ್ತಿಯಾಯಿತು. ಅದೇ ಅಧ್ಯಾತ್ಮದ ಕೊನೆಯ ಮಾತೂ ಎನಿಸಿತು. ಮುನಿ ಸಂನ್ಯಾಸಿಯ ಪರಿಪೂರ್ಣ ಜ್ಞಾನಕ್ಕೆ ಮಾರು ಹೋದರು.

ಅಂದಿನಿಂದ ಸಂನ್ಯಾಸಿ ವೆಂಕಟರಮಣರನ್ನು ಅವರು ಭಗವಾನ್ ರಮಣ ಮಹರ್ಷಿ ಎಂದು ಕರೆಯಲಾರಂಭಿಸಿದರು. ಆ ಹೆಸರೇ ಮುಂದೆ ಭಕ್ತಾದಿಗಳಲ್ಲಿ ಜನಪ್ರಿಯವಾಗಿ ಸರ್ವಮಾನ್ಯತೆ ಪಡೆಯಿತು. ಗಣಪತಿ ಮುನಿಗಳು ನಂತರದ ವರ್ಷಗಳಲ್ಲಿ ತಮ್ಮ ಶಿಷ್ಯರು ಮತ್ತು ಕಪಾಲಿ ಶಾಸ್ತ್ರಿ ಎಂಬ ಸಹ ವಿದ್ವಾಂಸರೊಂದಿಗೊಡಗೂಡಿ ಆಧ್ಯಾತ್ಮಿಕ ವಿಷಯಗಳ ಬಗ್ಗೆ ರಮಣರೊಂದಿಗೆ ಸಂವಾದ ನಡೆಸಿದರು. ಅದನ್ನು ಶ್ಲೋಕಗಳ ರೂಪದಲ್ಲಿ *ಶ್ರೀ ರಮಣ ಗೀತಾ* ಎಂದು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಅದರಲ್ಲಿ ಅವರು 'ಯಾವುದು ಏಕೈಕ ಸತ್ವವಾಗಿದೆಯೋ, ಆ ಬ್ರಹ್ಮ ವಸ್ತುವೇ ಇಲ್ಲಿ ರಮಣನೆಂಬ ನಾಮದಿಂದ ಕಂಗೊಳಿಸುತ್ತಿರುವುದು. ಆ ನಾಮಸ್ಮರಣೆಯಿಂದಲೇ ಮೋಕ್ಷವುಂಟಾಗುವುದು' ಎಂದು ಮನದುಂಬಿ ಘೋಷಿಸಿದ್ದಾರೆ.

ಪಾಶ್ಚಾತ್ಯ ಭಕ್ತನೊಬ್ಬ ಮೊದಲ ಬಾರಿಗೆ ರಮಣರ ಬಳಿಗೆ ಬಂದದ್ದೂ ಗಣಪತಿ ಶಾಸ್ತ್ರಿಗಳ ಮೂಲಕವೇ. ಭಾರತದ ಅಧ್ಯಾತ್ಮಿಕ ಪರಂಪರೆ ಬಗ್ಗೆ ಕುತೂಹಲ ಹೊಂದಿದ್ದ ಮತ್ತು ಸ್ವಲ್ಪ ತಾಂತ್ರಿಕ ವಿದ್ಯೆಯ ಅಭ್ಯಾಸವನ್ನೂ ಮಾಡಿದ್ದ ಎಫ್.ಎಚ್. ಹಂಫ್ರೀಸ್ ಎಂಬ ಇಂಗ್ಲೀಷ್ ಪೋಲೀಸ್ ಅಧಿಕಾರಿ ತಿರುವಣ್ಣಾಮಲೈ ಬಳಿಯ ವೆಲ್ಲೂರಿಗೆ ವರ್ಗಾವಣೆಯಾಗಿ ಬಂದ. ತನಗೆ ತೆಲುಗು ಕಲಿಸುತ್ತಿದ್ದ ನರಸಿಂಹಯ್ಯ ಎಂಬ ಸಾಧಕನ ಮೂಲಕ ಆತನಿಗೆ ಗಣಪತಿ ಶಾಸ್ತ್ರಿಗಳ ಸಂಪರ್ಕ ಲಭಿಸಿತು. ಈ ಹಂಫ್ರೀಸ್ ತಾನು ಕನಸಿನಲ್ಲಿ ಕಂಡ ಬೆಟ್ಟದ ಮೇಲಿನ ಸಂತನನ್ನು ಕಾಣಲು ಶಾಸ್ತ್ರಿಗಳ ಸಹಾಯ ಬೇಡಿದನು. ೧೯೧೧ರ ನವೆಂಬರ್‌ನಲ್ಲಿ ಆತ ಶಾಸ್ತ್ರಿ ಮತ್ತು ನರಸಿಂಹಯ್ಯನೊಂದಿಗೆ ರಮಣರನ್ನು ಬೆಟ್ಟದ ಮೇಲೆ ಗವಿಯ ಬಳಿ ನೋಡಿ, ಕನಸಿನಲ್ಲಿ ಕಂಡ ಸಂತ ಇವರೇ ಎಂದು ಗುರುತಿಸಿದ. ಸಂನ್ಯಾಸಿಯ ದೀರ್ಘ ಮೌನ ಸಾನ್ನಿಧ್ಯದಲ್ಲಿ ದಿವ್ಯಶಾಂತಿಯನ್ನು ಅನುಭವಿಸಿದ. ತಾನು ನಿಜವಾಗಿ ದೇಹವಲ್ಲ ಎಂಬ ಅರಿವು ಅಲ್ಲಿ ಅವನಲ್ಲಿ ಉದಿಸಿತು.

ಗಣಪತಿ ಶಾಸ್ತ್ರಿಗಳಂತೆಯೇ ಸಮಾಜಸೇವೆಯ ತುಡಿತವಿದ್ದ ಆ ಅಧಿಕಾರಿ ತನ್ನಿಂದ ಜಗತ್ತಿಗೆ ಸೇವೆ, ಸಹಾಯ ಸಾಧ್ಯವೇ ಎಂದು ಕೇಳಿದ. ರಮಣರು ಆತನಿಗೆ 'ನನಗೆ ನೀನೇ ಸಹಾಯ, ಸೇವೆ ಮಾಡಿಕೋ. ಆಗ ಜಗತ್ತಿಗೂ ಸಹಾಯ-ಸೇವೆ ಸಲ್ಲುವುದು. ಏಕೆಂದರೆ ಜಗತ್ತು ನಿನ್ನ ಹೊರಗಿಲ್ಲ;ಒಳಗಿದೆ' ಎಂದು ಉತ್ತರಿಸಿದರು. ಈ ಉತ್ತರದಿಂದ ಹೊಸ ಅರಿವಿಗೆ ತೆರೆದುಕೊಂಡ ಹಂಫ್ರೀಸ್, ರಮಣರನ್ನು ಮತ್ತೆ ಮತ್ತೆ ಭೇಟಿ ಮಾಡಿ ತನ್ನ ಸಂದೇಹಗಳನ್ನು ಪರಿಹರಿಸಿಕೊಂಡ. ಭಗವಾನರೂ ಆತ ಪ್ರತಿ ಸಲ ಬಂದಾಗಲೂ ಪ್ರೀತಿಯಿಂದ ಉಪಚರಿಸಿದರು. ಪವಾಡ, ಅತೀಂದ್ರಿಯ ಶಕ್ತಿಗಳ ಬಗ್ಗೆ ಅವರು, ಸಮಾಜ ಸೇವೆಯ ನೆಪದಲ್ಲಿ ಆ ಶಕ್ತಿಗಳ ಹಿಂದೆ ಬಿದ್ದು ಇದ್ದ ಶಾಂತಿಯನ್ನು ಕಳೆದುಕೊಳ್ಳುವ ಅಪಾಯವನ್ನು ಆತನಿಗೆ ವಿವರಿಸಿದರು.

ಆತ್ಮಾರಾಮನಾಗಿ ಇರಬಲ್ಲವನೇ-ಅವನು ಸರ್ವಜ್ಞನೂ, ಸರ್ವಾಂತರ್ಯಾಮಿಯೂ ಆಗಿರುವುದರಿಂದ-ಸರ್ವಶಕ್ತನೂ ಆಗಿರಬಲ್ಲ ಎಂದು ಸೂಚಿಸಿದರು.

ಈ ಮಧ್ಯೆ ೧೯೧೬ರ ಹೊತ್ತಿಗೆ ರಮಣರ ತಾಯಿ ತನ್ನದೇ ಕೌಟುಂಬಿಕ ಕಷ್ಟಗಳಿಂದ ನೊಂದು, ಉಳಿದ ಬದುಕನ್ನು ಸಂನ್ಯಾಸಿ ಮಗನೊಂದಿಗೇ ಕಳೆಯುವ ದೃಢನಿಶ್ಚಯ ಮಾಡಿ ತಿರುವಣ್ಣಾಮಲೈಗೆ ಬಂದರು. ಮೊದ ಮೊದಲು ರಮಣರು ತಮ್ಮ ತಾಯಿಯ ಕಡೆ ಗಮನವೀಯಲಿಲ್ಲ. ಆದರೆ ಭಕ್ತರ ಒತ್ತಾಯದ ಮೇರೆಗೆ ಅವರು ತಾಯಿ ಅಳಗಮ್ಮನವರಿಗೆ ತಮ್ಮೊಡನೆ ಗವಿಯಲ್ಲಿ ವಾಸಿಸಲು ಅನುಮತಿ ನೀಡಿದರು. ಅವರಿಗೆ ವಯಸ್ಸಾದುದರಿಂದ ತಮ್ಮ ಸೇವೆಗಾಗಿ ಅವರು ತಮ್ಮ ಚಿಕ್ಕ ಮಗನಾದ ನಾಗಸುಂದರಂನನ್ನು ಕರೆಸಿಕೊಂಡರು. ಪತ್ನಿಯನ್ನು ಕಳೆದುಕೊಂಡಿದ್ದ ಆತ ರಮಣರ ಸನ್ನಿಧಿಯಲ್ಲಿ ಸಂನ್ಯಾಸ ಸ್ವೀಕರಿಸಿ ಅವರ ಭಕ್ತರಲ್ಲಿ ಒಬ್ಬನಾದ. ಆದರೆ ಬೆಟ್ಟದ ಮೇಲಿನ ಇತರ ಸಂನ್ಯಾಸಿಗಳಿಂದ ರಮಣರು 'ಸಂಸಾರಸ್ಥ ಸಂನ್ಯಾಸಿ' ಎಂಬ ಟೀಕೆಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಆದರೆ ಮೊದಲಿನಿಂದಲೂ ಯಾವ ಶಾಸ್ತ್ರಚಾರಗಳನ್ನೂ ನಿಯಮದಂತೆ ಪಾಲಿಸದೆ ತಮ್ಮದೇ ರೀತಿಯಲ್ಲಿ ನಡೆದಿದ್ದ ರಮಣರು, ಈ ಟೀಕೆಯನ್ನು ಮನಸ್ಸಿಗೆ ಹಾಕಿಕೊಳ್ಳದೆ, ತಮ್ಮ ತಾಯಿ ಅಡುಗೆ ಆರಂಭಿಸಿದಾಗ ಅಲ್ಲಿಯೇ ಉಣ್ಣಲಾರಂಭಿಸಿದರು.

ಅದೇನೇ ಇದ್ದರೂ ರಮಣರ ಭಕ್ತಸಮೂಹ ದೊಡ್ಡಾದಾಗತೊಡಗಿತು. ಈ ಸಮೂಹ, ವಿರೂಪಾಕ್ಷ ಗವಿಯಿಂದ ಸ್ವಲ್ಪ ಮೇಲಕ್ಕೆ ನೀರಿನ ಒರತೆಯಿದ್ದ ಸ್ಥಳದಲ್ಲಿ ಹಾಳು ಬಿದ್ದಿದ್ದ 'ಸ್ಕಂದಾಶ್ರಮ'ವನ್ನು ನವೀಕರಿಸಿದರು. ರಮಣರು ತಮ್ಮ ನೆಲೆಯನ್ನು ಈ ಸರಳ ವಸತಿಗೆ ಬದಲಾಯಿಸಿದರು. ಅಲ್ಲಿ, ತಾಯಿ ನಂಬಿ ಪಾಲಿಸುತ್ತಿದ್ದ ಮಡಿ-ಮೈಲಿಗೆ, ವಿಧಿ-ನಿಷೇಧ-ಸಂಪ್ರದಾಯಗಳ ಅರ್ಥಹೀನತೆಯನ್ನು ಆಕೆಗೆ ಕ್ರಮೇಣ ಮನಗಾಣಿಸಿದರು. ೧೯೨೨ರ ಮೇ ತಿಂಗಳಿನಲ್ಲಿ ಅಳಗಮ್ಮನವರು ರಮಣರ ತೊಡೆಯ ಮೇಲೆ ಮಲಗಿ ಅವರ ಕರಸ್ಪರ್ಶ ಮತ್ತು ಆರ್ದ್ರ ಪ್ರಾರ್ಥನೆಯಿಂದ 'ಮೋಕ್ಷ' ಪಡೆಯುವ ವೇಳೆಗೆ, ಅವರು ರಮಣ ಭಕ್ತ ಸಮೂಹದ ಎಲ್ಲರ ತಾಯಿಯಾಗಿದ್ದರು. ಅಂದು ಕೂಡಾ ರಮಣರು, ತಾಯಿ ಮೋಕ್ಷ ಪಡೆದಿರುವುದರಿಂದ ತಮಗ ಸೂತಕವಿಲ್ಲೆಂದು, ಸಹ ಸಂನ್ಯಾಸಿಯೊಬ್ಬರಿಂದ ಅಡುಗೆ ಮಾಡಿಸಿ ಊಟ ಮಾಡಿದರು !

ಅಳಗಮ್ಮನವರ ದೇಹವನ್ನು ರಮಣರ ಸೂಚನೆಯಂತೆ ಅರುಣಾಚಲ ಬೆಟ್ಟದ ದಕ್ಷಿಣ ದಿಕ್ಕಿನ ಬುಡದಲ್ಲಿದ್ದ, ಪಳನಿತೀರ್ಥ ಎಂಬ ಕೊಳದ ಪಕ್ಕದಲ್ಲಿ

ಸಂಸ್ಕಾರ ಮಾಡಲಾಯಿತು. ಅಲ್ಲಿ ಶಿವಲಿಂಗವೊಂದನ್ನು ಸ್ಥಾಪಿಸಲಾಯಿತು. ಅದು 'ಮಾತೃ ಭೂತೇಶ್ವರ ಲಿಂಗ'ವೆಂದು ಹೆಸರಾಯಿತು. ರಮಣರು ದಿನವೂ ಸ್ಕಂದಾಶ್ರಮದಿಂದ ಕೆಳಗಿಳಿದು ತಾಯಿಯ ಸಮಾಧಿ ಬಳಿ ಕೂತು ಬರುತ್ತಿದ್ದರು. ಕೆಲವೇ ದಿನಗಳಲ್ಲಿ ಅವರಿಗೆ ಏಕೋ ತಾವಿನ್ನು ಮಾತೃಭೂತೇಶ್ವರ ಲಿಂಗದ ಬಳಿಯೇ ಇರಬೇಕೆಂದು ತೀವ್ರವಾಗಿ ಅನ್ನಿಸತೊಡಗಿತು. ೧೯೨೨ರ ಡಿಸೆಂಬರ್‌ನ ಒಂದು ದಿನ ಅವರು ಅಲ್ಲಿಯೇ ಒಂದು ಗುಡಿಸಲು ಹಾಕಿಕೊಂಡು ನೆಲೆಸಿಬಿಟ್ಟರು.

–೬–

ರಮಣರು ತಮ್ಮ ತಾಯಿಯ ಸಮಾಧಿ ಬಳಿಯೇ ನೆಲೆಸಲಾರಂಭಿಸಿದೊಡನೆ ಬೆಟ್ಟದ ಮೇಲಿದ್ದ ಅವರ ಸಹ–ಸಂನ್ಯಾಸಿಗಳೂ ಅಲ್ಲಿಗೇ ಬಂದರು. ನಂತರ ದೇಶದ ಬೇರೆ ಬೇರೆ ಕಡೆಗಳಿಂದ ದೊಡ್ಡ ಸಂಖ್ಯೆಯಲ್ಲಿ ಭಕ್ತರೂ, ದರ್ಶನಾರ್ಥಿಗಳೂ ಅಲ್ಲಿಗೆ ಬರಲಾರಂಭಿಸಿದರು. ಇದರಿಂದಾಗಿ ಅಡುಗೆಗಾಗಿ ಮತ್ತು ಜನ ವಸತಿಗಾಗಿ ಇನ್ನೂ ಒಂದೆರಡು ಗುಡಿಸಲುಗಳು ಎದ್ದವು. ಇದೇ ರಮಣಾಶ್ರಮದ ಆರಂಭ. ಇದರ ಉಸ್ತುವಾರಿಯನ್ನು ನಿರಂಜನಾನಂದ ಸ್ವಾಮಿಯಾಗಿ ಸಂನ್ಯಾಸ ಸ್ವೀಕರಿಸಿದ್ದ ಅವರ ತಮ್ಮ ನಾಗಸುಂದರರೇ ವಹಿಸಿಕೊಂಡರು. ಇದಕ್ಕೆಲ್ಲ ಮಾತೃಭೂತೇಶ್ವರ ಲಿಂಗದ ರೂಪದಲ್ಲಿದ್ದ ಸ್ತ್ರೀಶಕ್ತಿಯೇ ಪ್ರೇರಣೆ ಎಂದು ರಮಣರು ಭಾವಿಸಿದ್ದರು. ಆ ಭಾವನೆಗೆ ಬಲ ಬಂದಂತೆ, ಭಕ್ತರಿಂದ ಹಣಕಾಸು ಮತ್ತು ಇತರ ರೂಪಗಳ ಸಹಾಯ ಬರಲಾರಂಭಿಸಿತು. ಅಲ್ಲಿ ಕ್ರಮೇಣ ಸಣ್ಣಪುಟ್ಟ ಕಟ್ಟಡಗಳು ಎದ್ದವು. ಮುಖ್ಯವಾಗಿ ರಮಣರಿಗಾಗಿ ಹೆಂಚು ಹೊದಿಸಿದ ವಿಶಾಲ ಕೊಠಡಿಯೊಂದು ೧೯೨೬ರಲ್ಲಿ ನಿರ್ಮಾಣವಾಯಿತು. ಅಲ್ಲಿ ಭಕ್ತರೊಬ್ಬರು ನೀಡಿದ ಸೋಫಾವೊಂದರ ಮೇಲೆ ಸುಖಾಸೀನರಾಗಿ ಕುಳಿತ ರಮಣರು ಧ್ಯಾನಾವಸ್ಥೆಯಲ್ಲಿ ಭಕ್ತರಿಗೆ ದರ್ಶನ ನೀಡುತ್ತಿದ್ದರು. ರಾತ್ರಿ ಅಲ್ಲಿಯೇ ನಿದ್ರಿಸುತ್ತಿದ್ದರು. ಇದನ್ನು ಈಗಲೂ ಧ್ಯಾನಮಂದಿರ(*ಮೆಡಿಟೇಷನ್ ಹಾಲ್*) ಎಂದು ಸಂರಕ್ಷಿಸಲಾಗಿದ್ದು, ಸೋಫಾದ ಮೇಲೆ ರಮಣರ ಪೂರ್ಣಪ್ರಮಾಣದ ಚಿತ್ರವೊಂದನ್ನು ಇಡಲಾಗಿದೆ. ಧ್ಯಾನಿ ರಮಣರ ಮುಂದೆ ಉರಿಸಲಾಗುತ್ತಿದ್ದಂತೆ ಈಗಲೂ ಈ ಚಿತ್ರದ ಮುಂದೆ ಸದಾ ಸುಗಂಧ ಭರಿತ ಊದುಗಡ್ಡಿಗಳನ್ನು ಉರಿಸಲಾಗುತ್ತಿದೆ. ಆಶ್ರಮಕ್ಕೆ ಬರುವ ಭಕ್ತರು ಈ ಮಂದಿರಕ್ಕೆ ಬಂದು ಈಗಲೂ ಕೆಲ ಕಾಲ ಮೌನವಾಗಿ ಕೂತು, ರಮಣರ ಉಪಸ್ಥಿತಿಯನ್ನು ಅನುಭವಿಸಿ ಹೋಗುತ್ತಾರೆ.

ಈ ಮಂದಿರದಲ್ಲೇ ರಮಣರು ಸುಮಾರು ೨೫ ವರ್ಷಗಳ ಕಾಲ ದೇಶ–ವಿದೇಶಗಳಿಂದ ಬಂದ ಭಕ್ತರು ಮತ್ತು ಜಿಜ್ಞಾಸುಗಳು ದೇವರು, ಧರ್ಮ, ಅರ್ಥ,

ಕಾಮ, ಆತ್ಮಜ್ಞಾನ, ಗುರು, ಧ್ಯಾನ, ಮೋಕ್ಷ, ಕರ್ಮ, ಪುನರ್ಜನ್ಮ ಇತ್ಯಾದಿ ಆಧ್ಯಾತ್ಮಿಕ ವಿಷಯಗಳ ಬಗ್ಗೆ ಕೇಳಿದ ಸಾವಿರಾರು ಪ್ರಶ್ನೆಗಳಿಗೆ ಉತ್ತರ ನೀಡಿದ್ದು. ಈ ಮೂಲಕ, ಸಾಂತ್ವನ ಅರಸಿ ಬಂದ ಸಾವಿರಾರು ಜನರಿಗೆ ಅಭಯ ಪ್ರದಾನ ಮಾಡಿ ಆತ್ಮಜ್ಞಾನದ ಪಾರಮ್ಯವನ್ನು ಎತ್ತಿ ಹಿಡಿದದ್ದು. ಈ ಪ್ರಶ್ನೋತ್ತರಗಳನ್ನು, ಅಲ್ಲಿನ ಘಟನೆಗಳನ್ನು ಹಲವಾರು ದೇಶ-ವಿದೇಶಿ ಭಕ್ತರು ಪುಸ್ತಕ ರೂಪದಲ್ಲಿ ದಾಖಲಿಸಿದ್ದಾರೆ. ಇವುಗಳಲ್ಲಿ ಮುಖ್ಯವಾದವು, ಮುಂಗಾಲ ವೆಂಕಟರಾಮಯ್ಯ ಅವರು ದಾಖಲಿಸಿರುವ *Talks with Sri Ramana Maharshi* (ಇದನ್ನು ಡಾ॥ ಎ.ಎಸ್. ವೇಣುಗೋಪಾಲ ರಾಯರು 'ಶ್ರೀ ರಮಣ ಮಹರ್ಷಿಗಳೊಡನೆ ಮಾತುಕತೆ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ.) ಮತ್ತು ದೇವರಾಜ ಮೊದಲಿಯಾರರ *Day by day with Bhagavan*.(ಇದೂ ಈಗ ಎಸ್.ಕೆ. ಸ್ವಾಮಿ ಅವರಿಂದ 'ಅನುದಿನವೂ ಭಗವಾನರ ಸನ್ನಿಧಿಯಲ್ಲಿ' ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ಅನುವಾದವಾಗಿದೆ) ಇನ್ನು ಅವರ ಸನ್ನಿಧಿಯಲ್ಲಿದ್ದ ಅಥವಾ ಸನ್ನಿಧಿಗೆ ಬಂದ ಎನ್. ಬಲರಾಮರೆಡ್ಡಿ, ಕೆ.ಕೆ. ನಂಬಿಯಾರ್, ಟಿ.ಕೆ. ಸುಂದರೇಶ ಅಯ್ಯರ್, ಕುಂಜುಸ್ವಾಮಿ, ಕನಕಮ್ಮಾಳ್, ಸೂರಿ ನಾಗಮ್ಮ, ಪಾಲ್‌ಬ್ರಂಟನ್, ಆರ್ಥರ್ ಓಸ್ಬೋರ್ನ್, ಮೌನಿ ಸಾಧು, ಎಸ್.ಎಸ್. ಕೊಹೆನ್, ಡೇವಿಡ್ ಗಾಡ್‌ಮನ್ ಮುಂತಾದವರು ರಮಣರೊಡನೆ ತಾವು ಕಳೆದ ದಿನಗಳ ಅನುಭವವನ್ನು ಪುಸ್ತಕ ರೂಪಗಳಲ್ಲಿ ಬರೆದಿದ್ದಾರೆ.

ಇವರಲ್ಲಿ ಪಾಲ್ ಬ್ರಂಟನ್ ಎಂಬ ಆಂಗ್ಲೇಯನೇ ರಮಣರನ್ನು ಮೊದಲ ಬಾರಿಗೆ ಜಗತ್ತಿಗೆ ಪರಿಚಯಿಸಿದವನು ಎಂದು ಹೇಳಬಹುದು. ಈತ ಭಾರತದ ಅಧ್ಯಾತ್ಮವನ್ನು ಅಭ್ಯಸಿಸಲು ೧೯೩೦ರಲ್ಲಿ ಭಾರತಕ್ಕೆ ಬಂದು ಅನೇಕ ಸಾಧು-ಸಂತರನ್ನೂ, ಯೋಗಿ, ಬಾಬಾ, ಅವಧೂತರನ್ನೂ ಭೇಟಿಯಾಗುತ್ತಾನೆ. ಆದರೆ ತೃಪ್ತಿಯಾಗದೆ ಕೊನೆಗೆ ಪವಾಡ ಸದೃಶವೆನ್ನಬಹುದಾದ ಆಕಸ್ಮಿಕವೊಂದರ ಮೂಲಕ ರಮಣರನ್ನು ಕಂಡು ಮಾತಾಡಿ, ಅವರ ಸನ್ನಿಧಿಯಲ್ಲಿ ಆತ್ಯಂತಿಕವೆನ್ನಬಹುದಾದ ಶಾಂತಿಯನ್ನು ಅನುಭವಿಸುತ್ತಾನೆ. ಈತನ '*Search in Secret India*' ಪುಸ್ತಕ ಪಶ್ಚಿಮ ದೇಶಗಳಲ್ಲಿ ರಮಣರ ಬಗ್ಗೆ ಅಪಾರ ಕುತೂಹಲ ಹುಟ್ಟಿಸಿ, ದೇಶ ವಿದೇಶಗಳಿಂದ ನೂರಾರು ಜನ, ರಮಣರನ್ನು ಕಾಣಲೆಂದೇ ಭಾರತಕ್ಕೆ ಬರುತ್ತಾರೆ. ಇದರ ಪರಿಣಾಮವಾಗಿ ರಮಣರನ್ನು ಕುರಿತ ಪುಸ್ತಕಗಳು, ಚಿತ್ರಗಳು ಜಗತ್ತಿನ ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟವಾಗಿ ಇನ್ನಷ್ಟು ಭಕ್ತರು ಇವುಗಳಿಂದ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪ್ರಭಾವಿತರಾಗಿ ಇವರಲ್ಲಿಗೆ ಧಾವಿಸಿ ಬರುತ್ತಾರೆ. ಪಶ್ಚಿಮದ ಬಹುಪಾಲು ಎಲ್ಲ ಭಕ್ತರೂ, ಜಿಜ್ಞಾಸುಗಳೂ ಇವರಲ್ಲಿ ಬುದ್ಧನನ್ನು ಕಾಣುತ್ತಾರೆ.

ಏಕೆಂದರೆ ಬುದ್ಧನಂತೆಯೇ ರಮಣರು, ವೈಯಕ್ತಿಕ ಆತ್ಮವೆಂಬುದಿಲ್ಲ; ಅದು ಮನಸ್ಸು ಮಾತ್ರ ಎಂದು ಸೂಚಿಸುತ್ತಾರೆ. ಇರುವುದೊಂದೇ ಶೂನ್ಯ ಎಂದು ಬುದ್ಧ ಕಂಡುಕೊಂಡಂತೆ ಇವರು ಅದನ್ನೇ ಇನ್ನೊಂದು ನೆಲೆಯಲ್ಲಿ, ಪರಿಭಾಷೆಯಲ್ಲಿ ಇರುವುದೊಂದೇ ಆತ್ಮ ಎಂದು ಸಾರುತ್ತಾರೆ. ಎಲ್ಲವೂ ಶೂನ್ಯದಿಂದ ಹುಟ್ಟಿ ಶೂನ್ಯದಲ್ಲಿ ಮುಳುಗುತ್ತದೆ ಎಂಬ ಬುದ್ಧನ ಮಾತಿನಂತೆಯೇ ರಮಣರು ಸರ್ವವೂ ಅಪರಿಮಿತವೂ, ಅಪ್ರಮೇಯವೂ ಆದ ಆತ್ಮನಲ್ಲಿದೆ; ಇದರ ಅರಿವೇ ಆತ್ಮ ಸಾಕ್ಷಾತ್ಕಾರ; ಹಾಗಾಗಿ ಅದು ಹೊರಗಿಂದ ಪಡೆಯುವ ವಸ್ತುವಲ್ಲ; ಸರ್ವದಲ್ಲಿ ಇರುವುದೂ ನಾನೇ ಎಂಬ ಅನುಭಾವದ ಅರಿವಿನಲ್ಲಿ ನಾನು ಎಂಬ ಉಬ್ಬರವನ್ನು ಕಳೆದುಕೊಳ್ಳುವ ಮೂಲಕ ಅದನ್ನು ಇಲ್ಲಿ ಈಗಲೇ ಪಡೆಯಬಹುದು ಎನ್ನುತ್ತಾರೆ. ಹಾಗಾಗಿ ನಿನ್ನೆ ಅಥವಾ ನಾಳೆ ಅಥವಾ ಹಿಂದಿನ ಜನ್ಮ ಮತ್ತು ಮುಂದಿನ ಜನ್ಮಗಳ ಬಗ್ಗೆ ಯೋಚಿಸುವುದರ ಬದಲಾಗಿ ಇಂದಿನ ಅಥವಾ ಈ ಜನ್ಮದ ಸತ್ಯವನ್ನು ತಿಳಿ; ಆ ಮೂಲಕ ಎಲ್ಲವನ್ನೂ ತಿಳಿ ಎನ್ನುತ್ತಾರೆ.

ಹೀಗೆ ಬುದ್ಧನಂತೆಯೇ, ರಮಣರು ತನ್ನೊಳಗೇ ನಡೆಸಬೇಕಾದ ಪ್ರಶ್ನೋತ್ತರಗಳ ವಿಚಾರ ಮಾರ್ಗದ ಮೂಲಕ ಸ್ವಯಂ ಅರಿವು ಪಡೆದು ಅಜ್ಞಾನವೆಂಬ ದುಃಖದಿಂದ ಪಾರಾಗುವ ಬಗೆಯನ್ನು ಬೋಧಿಸುತ್ತಾರೆ. ಈ ಸಂಬಂಧದ ಅವರ ಬೀಜ ಮಾತೆಂದರೆ : 'ದೇವರು, ಗುರು, ಸಾಧು-ಸಂತ-ಋಷಿ-ಮುನಿಗಳೆಲ್ಲರ ಮೇಲಿರುವವನು (ಆತ್ಮ)ಜ್ಞಾನಿ. ಏಕೆಂದರೆ ಅವರೆಲ್ಲ ಸ್ಥಿತವಾಗಿರುವುದು ಈತನಲ್ಲೇ; ಆತ್ಮನಲ್ಲೇ. ಒಮ್ಮೆ ಭಕ್ತರ ರಮಣ ಭಜನೆಯಲ್ಲಿ ರಮಣರೂ ಸೇರಿಕೊಡು ಹಾಡಲು ಆರಂಭಿಸಿದರು. ಇದರಿಂದ ಭಕ್ತನೊಬ್ಬ ಆಶ್ಚರ್ಯಚಕಿತನಾದಾಗ, ಅವರು ಹೇಳಿದ್ದು: 'ರಮಣನೆಂದರೆ ಈ ಐದೂವರೆ ಅಡಿಯ ದೇಹವೆಂದು ನೀವು ಭಾವಿಸಿರುವುದೇ ನಿಮ್ಮ ಆಶ್ಚರ್ಯಕ್ಕೆ ಕಾರಣ!'

-೭-

ಬುದ್ಧನಂತೆಯೇ ರಮಣರು ಜೀವ ಕಾರುಣ್ಯವೇ ಮೈವೆತ್ತಂತಿದ್ದರು. ತಮ್ಮ ಭಕ್ತರನ್ನು ನೋಡುತ್ತಿದ್ದ ಪ್ರೀತಿ-ವಾತ್ಸಲ್ಯಗಳಿಂದಲೇ ಅವರು ಆಶ್ರಮದಲ್ಲಿ ಮತ್ತು ಅದರ ಸುತ್ತಮುತ್ತ ವಾಸಿಸುತ್ತಿದ್ದ ಪ್ರಾಣಿ-ಪಕ್ಷಿಗಳನ್ನು ಪೊರೆಯುತ್ತಿದ್ದರು. ಅಳಿಲು, ನಾಯಿ, ಕೋತಿ, ಹಸುಗಳು ಅವರ ಬಳಿ ನಿರ್ಭಯವಾಗಿ ಬಂದು ತಮ್ಮದೇ ರೀತಿಯಲ್ಲಿ ಸಂವಾದಿಸಿ ಆಹಾರ ಸ್ವೀಕರಿಸುತ್ತಿದ್ದವು. ಅವು ಸತ್ತಾಗ ಮನುಷ್ಯರಂತೆಯೇ ಅವುಗಳಿಗೆ ವಿಧಿಪೂರ್ವಕ ಸಂಸ್ಕಾರ ನೆರವೇರಿಸುತ್ತಿದ್ದರು. ಇನ್ನು ಹುಲಿ, ಚಿರತೆ, ಹಾವು, ಚೇಳುಗಳು ಅವರ ಸಮಚಿತ್ತದ ಕಣ್ಣೋಟದ ಸೂಚನೆಗಳಿಂದಲೇ ಮರೆಗೆ

ಸರಿದು ಹೋಗುತ್ತಿದ್ದವು. ಜಡ-ಚೇತನಗಳ ಬೇಧವಿಲ್ಲದೆ ಸೃಷ್ಟಿಯಲ್ಲಿ ಅಂತರ್ಗತವಾಗಿದ್ದ ಮಮತೆಯ ಪ್ರತೀಕದಂತಿದ್ದ ರಮಣರು, ತಮ್ಮನ್ನು ವರ್ಣಾಶ್ರಮವನ್ನು ಮೀರಿದ 'ಅತ್ಯಾಶ್ರಮಿ' ಎಂದು ಕರೆದುಕೊಳ್ಳುತ್ತಿದ್ದರು. ಅವರು ಬೆಟ್ಟದ ಮೇಲೆ ತಮ್ಮ ಹಳೆಯ ಗೆಳೆಯರಾಗಿದ್ದ ಅಸ್ಪೃಶ್ಯರೂ ಸೇರಿದಂತೆ ಎಲ್ಲರಿಂದ ಆಹಾರ ಸ್ವೀಕರಿಸುತ್ತಿದ್ದರು. ಮತ್ತು ಆಶ್ರಮದಲ್ಲಿ ಎಲ್ಲ ಜಾತಿಯ ಭಕ್ತರಿಗೂ (ಒಂದೇ ರೀತಿಯ) ಆಹಾರ ಒದಗಿಸುತ್ತಿದ್ದರು. ಆದರೆ ಮಡಿ-ಮೈಲಿಗೆಯ ಬ್ರಾಹ್ಮಣರನ್ನು ಖಂಡಿಸಲು ಹೋಗದೆ, ಅವರೂ ಕ್ರಮೇಣ ಬದಲಾಗುವರೆಂಬ ನಂಬಿಕೆಯಿಂದ ಮೌನವಾಗಿ ಸಹಿಸುತ್ತಿದ್ದರು. ಊಟದ ಮನೆಯಲ್ಲಿ ತಮ್ಮ ಅವರು ಒಂದು ಪಕ್ಕದಲ್ಲಿ ಮಡಿ(ವೈದಿಕ) ಬ್ರಾಹ್ಮಣರನ್ನೂ ಇನ್ನೊಂದು ಪಕ್ಕ ಸಾಮಾನ್ಯ ಬ್ರಾಹ್ಮಣರೂ ಸೇರಿದಂತೆ ಇತರೆಲ್ಲರನ್ನೂ ಕೂರಿಸಿಕೊಂಡು ಊಟ ಮಾಡುತ್ತಿದ್ದರು.

ರಮಣರು ತಮ್ಮ ಬಳಿಗೆ ಅಥವಾ ಆಶ್ರಮಕ್ಕೆ ಏನೇ ತಿನಿಸು ಬಂದರೂ, ಅದು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗುವಂತಿದ್ದರೆ ಮಾತ್ರ ಅದನ್ನು ಸೇವಿಸುತ್ತಿದ್ದರು. ಊಟೋಪಚಾರಗಳಲ್ಲಿ ತಮಗೇನಾದರೂ ಹೆಚ್ಚು ಪ್ರಾಶಸ್ತ್ಯ ನೀಡುವುದು ಕಂಡು ಬಂದಲ್ಲಿ ಸಂಬಂಧಪಟವ್ಪರನ್ನು ಕಟುವಾಗಿ ಎಚ್ಚರಿಸುತ್ತಿದ್ದರು. ಬೆಳಗಿನ ಝಾವಕ್ಕೇ ಎದ್ದು ಸ್ವತಃ ತಾವೇ ಭಕ್ತರ ತಿಂಡಿ-ಊಟಗಳ ಸಿದ್ಧತೆಯಲ್ಲಿ ಭಾಗಿಯಾಗುತ್ತಿದ್ದರು. ಆಶ್ರಮಕ್ಕೆ ಯಾರೇ ಬರಲಿ-ಅವರು ರಾಷ್ಟ್ರಪತಿ ರಾಜೇಂದ್ರ ಪ್ರಸಾದರೇ ಆಗಿರಲಿ ಅಥವಾ ಬರೋಡಾದ ಮಹಾರಾಜರೇ ಆಗಿರಲಿ-ಯಾರ ಬಗೆಗೂ ವಿಶೇಷ ಗಮನವಿರದಂತೆ ಎಲ್ಲರನ್ನೂ ಸಮಾನವಾಗಿ ಕಾಣುವ ಆಂತರಿಕ ಸಮತೆ ಅವರಲ್ಲಿ ತಾನೇ ತಾನಾಗಿ ನೆಲೆಸಿತ್ತು. ಒಮ್ಮೆ ರಾಷ್ಟ್ರಪತಿ ರಾಜೇಂದ್ರಪ್ರಸಾದರು ಆಶ್ರಮಕ್ಕೆ ಭೇಟಿ ನೀಡಿದ್ದಾಗ ಆಶ್ರಮದ ಮೇಲುಸ್ತುವಾರಿಯವರು ಸ್ವಲ್ಪ ಅತ್ಯುತ್ಸಾಹ ಪ್ರಕಟಿಸಿ, ಅತಿಥಿಗಳ ಊಟದ ನಂತರವಷ್ಟೇ 'ನಾರಾಯಣ ಸೇವೆ'(ಸಾಧು-ಸಂತರಿಗೆ ಭಿಕ್ಷೆ) ಎಂದು ದಿನ ನಿತ್ಯದ ಕಾರ್ಯಕ್ರಮವನ್ನು ಬದಲು ಮಾಡಿದರು. ಅಂದು ರಮಣರು ಸದ್ದು ಮಾಡದೆ ಸಾಧು-ಸಂತರ ಸರತಿ ಸಾಲಿನಲ್ಲಿ ಭಿಕ್ಷಕ್ಕೆ ನಿಂತು ಬಿಟ್ಟರು!

ಇದನ್ನೆಲ್ಲ ಅರಿತೇ ಮಹಾತ್ಮ ಗಾಂಧಿ ತಮ್ಮ ಶಿಷ್ಯರನೇಕರಿಗೆ, ಆಯಾಸವಾದಾಗಲೆಲ್ಲ ಪುನಃಶ್ಚೇತನಕ್ಕಾಗಿ ರಮಣಾಶ್ರಮಕ್ಕೆ ಹೋಗಿಬರುವಂತೆ ಸೂಚಿಸುತ್ತಿದ್ದರು. ರಮಣರು ಕೂಡಾ ಗಾಂಧೀಜಿ ಬಗ್ಗೆ ಅಪಾರ ಗೌರವ ಹೊಂದಿದ್ದರು. ಪ್ರತಿನಿತ್ಯ ಪತ್ರಿಕೆಗಳ ಮೂಲಕ ಗಾಂಧಿಯವರ ಕೆಲಸಗಳನ್ನು ಕುತೂಹಲದಿಂದ ಗಮನಿಸುತ್ತಿದ್ದರು. ತಮ್ಮ ಮೂಲಕ ಕೆಲಸ ಮಾಡುತ್ತಿರುವ ಶಕ್ತಿಯೇ ಅವರಲ್ಲಿಯೂ ಕೆಲಸ ಮಾಡುತ್ತಿದ್ದು ಇಬ್ಬರೂ ಒಂದೇ ಕೆಲಸವನ್ನು ಬೇರೆ ಬೇರೆ ರೀತಿಯಲ್ಲಿ ಮಾಡುತ್ತಿರುವುದಾಗಿ ಅವರು ಹೇಳುತ್ತಿದ್ದರು.

ಆಶ್ಚರ್ಯವೆಂದರೆ, ಗಾಂಧಿ ಹತ್ಯೆಯಾದ ವರ್ಷದಲ್ಲೇ ರಮಣರ ದೇಹಾಂತ್ಯವೂ ಆರಂಭವಾಯಿತು. ೧೯೪೮ರ ಡಿಸೆಂಬರ್‌ನಲ್ಲಿ ಭಗವಾನರ ಎಡ ಮೊಣಕೈ ಮೇಲೆ ಸಣ್ಣ ಗುಳ್ಳೆಯೊಂದು ಕಾಣಿಸಿಕೊಂಡಿತು. ಮಾತೃಭೂತೇಶ್ವರ ಲಿಂಗಕ್ಕಾಗಿ ದೇವಸ್ಥಾನವೊಂದು ಕಟ್ಟಲಾಯಿತು. ಅದರ ಕುಂಭಾಭಿಷೇಕ ಮುಗಿಯುವ ಹೊತ್ತಿಗೆ, ಆ ಗುಳ್ಳೆ ಒಂದು ದೊಡ್ಡ ವ್ರಣವಾಗಿ ಬೆಳೆದಿತ್ತು. ಅದನ್ನು 'ಸರ್ಕೋಮ' ಎಂಬ ಭಯಂಕರ ಕ್ಯಾನ್ಸರ್ ಗಡ್ಡೆ ಎಂದು ಗುರುತಿಸಿ, ಅದಕ್ಕೆ ಚಿಕಿತ್ಸೆಯನ್ನು ಆರಂಭಿಸಲಾಯಿತು. ವೈದ್ಯರು ಕೈಯನ್ನೇ ಶಸ್ತ್ರಚಿಕಿತ್ಸೆಯ ಮೂಲಕ ತೆಗೆಯಲು ಮುಂದಾದರಾದರೂ, ರಮಣರು ವ್ರಣಕ್ಕಷ್ಟೇ ಚಿಕಿತ್ಸೆ ಸಾಕು ಎಂದರು. ದೇಶದ ಮೂಲೆ ಮೂಲೆಗಳಿಂದ ಎಲ್ಲ ವೈದ್ಯ ಪದ್ಧತಿಗಳ ವೈದ್ಯರು ಬಂದು ಚಿಕಿತ್ಸೆ ನಡೆಸಿದರು. ಆದರೆ ಕ್ಯಾನ್ಸರ್ ಗಡ್ಡೆ ಒಂದು ಕಡೆ ಕರಗಿ ಹೋದದ್ದು ಸನಿಹದಲ್ಲೇ ಇನ್ನೊಂದು ಕಡೆ ಕಾಣಿಸಿಕೊಳ್ಳುತ್ತಿತ್ತು. ಆದರೆ ರಮಣರು ಎಷ್ಟರ ಮಟ್ಟಿಗೆ ದೇಹ ಭಾವವನ್ನು ಕಳೆದುಕೊಂಡು ಎಂತಹ ಆತ್ಮನಿಷ್ಠೆಯಲ್ಲಿರುತ್ತಿದ್ದರೆಂದರೆ, ಅವರು ನೋವು ನಿವಾರಕ ಅಥವಾ ಅರಿವಳಿಕೆ ಇಲ್ಲದೇ ಎರಡು ಬಾರಿ ಅದರ ಶಸ್ತ್ರಕ್ರಿಯೆಗೆ ಒಳಗಾದರು.

ಮುಖದ ಮೇಲೆ ನೋವಿನ ಛಾಯೆಯೂ ಇಲ್ಲದೆ, ಭಗವಾನರು ಒಳಗೇ ಎಷ್ಟು ನೋವು ತಿನ್ನುತ್ತಿದ್ದಾರೋ ಎಂದು ಅನೇಕ ಭಕ್ತರು ದುಃಖಿತರಾಗಿ ಅದನ್ನು ಮುಚ್ಚಿಡಲಾಗದೆ ಅವರಲ್ಲಿ ವ್ಯಕ್ತಪಡಿಸುತ್ತಿದ್ದರು. ಆಗ ಭಕ್ತರಿಗೆ ಅವರು ಶ್ರೀಮದ್ ಭಾಗವತದ ಶ್ಲೋಕವೊಂದನ್ನು ಉಲ್ಲೇಖಿಸುತ್ತಾ ಅವರು ಹೀಗೆ ಹೇಳುತ್ತಿದ್ದರು: 'ಕರ್ಮಫಲವಾದ ದೇಹ ವಿಶ್ರಾಂತಿಯಲ್ಲಿರಲಿ, ಚಲಿಸುತ್ತಿರಲಿ ಅಥವಾ ಬದುಕಿರಲಿ, ಸತ್ತಿರಲಿ, ಮತ್ತೇರಿದ ಕುಡುಕನಿಗೆ ಮೈಮೇಲಿನ ಬಟ್ಟೆಯ ಅರಿವಿಲ್ಲದಿರುವಂತೆ ಆತ್ಮಜ್ಞಾನಿಯಾದ ಸಂತನಿಗೆ ಅದರ ಅರಿವಿರುವುದಿಲ್ಲ!' ಹಾಗೇ, ತಮ್ಮ ಸ್ವಂತ ಸಂಕಲ್ಪದಿಂದ ಕಾಯಿಲೆಯನ್ನು ವಾಸಿಮಾಡಿಕೊಳ್ಳಿರೆಂದು ಪ್ರಾರ್ಥಿಸಿದ ಭಕ್ತರಿಗೆ ಅವರು ಹೇಳಿದ್ದು: 'ಸಂಕಲ್ಪ ಮಾಡಲು ಇರುವವರಾದರೂ ಯಾರು? ಪ್ರತ್ಯೇಕ ಅಸ್ತಿತ್ವವೆಂಬುದೇ ಇಲ್ಲಿಲ್ಲ. ಸುಮ್ಮನಿರಿ, ಬೇಗನೆ ಎಲ್ಲ ಸರಿ ಹೋಗುವುದು!'

ಭಗವಾನರು ಎಲ್ಲ ಸರಿ ಹೋಗುವುದು ಎಂದುದರ ಅರ್ಥ, ಅವರ ಕಾಯಿಲೆ ವಾಸಿಯಾಗುವುದು ಎಂದಲ್ಲ. ಅದರ ಅರ್ಥವನ್ನು ಅವರ ದೇಹವು ಕಾಯಿಲೆಯಿಂದ ಜರ್ಝರಿತವಾಗಿ ಅಂತ್ಯ ಸಮೀಪವೆನಿಸಿದಾಗ ಆತಂಕಿತನಾದ ಅವರ ಸಹಾಯಕನೊಬ್ಬನಿಗೆ ಅವರು ಹೇಳಿದ ಈ ಮಾತುಗಳು ಸ್ಪಷ್ಟಪಡಿಸುತ್ತವೆ: 'ಊಟವಾದ ಮೇಲೆ ಊಟ ಮಾಡಿದ ಎಲೆಯನ್ನು ಯಾರಾದರೂ ಇಟ್ಟುಕೊಳ್ಳುತಾರೆಯೇ?' ರಮಣರು ದೇಹವನ್ನು ಚೈತನ್ಯದ ಹೊರಚಾಚು ಮಾತ್ರ

ಎಂದು ವರ್ಣಿಸುತ್ತಿದ್ದರು. ಹಾಗಾಗಿ, ಜ್ಞಾನಿಯಾದವನು ದೇಹಾಂತ್ಯದಲ್ಲಿ, ಆಳೊಬ್ಬ ತನ್ನ ತಲೆಯ ಮೇಲಿನ ಭಾರವನ್ನು ಮಾಲೀಕನ ಮನೆಯ ಬಾಗಿಲಲ್ಲಿ ಇಳಿಸಿದಾಗ ಪಡುವಷ್ಟೇ ನಿಸೂರನ್ನು ಅನುಭವಿಸುವನು ಎಂದು ಅವರು ಆ ಸಹಾಯಕನಿಗೆ ವಿವರಿಸಿ ಹೇಳಿದರು.

೧೯೫೦ರ ಏಪ್ರಿಲ್ ೧೪ರಂದು ಆ ನಿಸೂರಿನ ದಿನವಾಗಿತ್ತು. ಅಂದು ಸಂಜೆ ಭಗವಾನರ ದರ್ಶನಕ್ಕಾಗಿ ದೊಡ್ಡ ಸಂಖ್ಯೆಯಲ್ಲಿ ಭಕ್ತರು ಬಂದಿದ್ದರು. ಆದರೆ ಭಗವಾನರ ಗಂಭೀರ ದೇಹಸ್ಥಿತಿಯಿಂದಾಗಿ ಆಶ್ರಮ ಮೇಲ್ವಿಚಾರಕರು ಭಕ್ತರಿಗೆ ದರ್ಶನವನ್ನು ನಿರಾಕರಿಸಿದ್ದರು. ಇದನ್ನು ತಿಳಿದ ಭಗವಾನರು ಮೇಲ್ವಿಚಾರಕರ ತೀರ್ಮಾನ ಮತ್ತು ಸೂಚನೆಗಳನ್ನು ತಳ್ಳಿ ಹಾಕಿ ನೂರಾರು ಭಕ್ತರಿಗೆ ದರ್ಶನ ಭಾಗ್ಯ ನೀಡಿದರು. ಅಂದು ಕೊನೆಯುಸಿರೆಳೆಯುವ ಮುನ್ನ ತಮ್ಮ ಸೇವೆ ಮಾಡುತ್ತಿದ್ದ ಸಹಾಯಕ ಕುಂಜು ಸ್ವಾಮಿಗೆ ಇಂಗ್ಲೀಷ್‌ನಲ್ಲಿ 'ಥ್ಯಾಂಕ್ಸ್' ಹೇಳಿದರು. ಇಂಗ್ಲೀಷ್ ಅರ್ಥವಾಗದ ಆ ಸಹಾಯಕನಿಗೆ ಅದರ ಅರ್ಥವನ್ನು ವಿವರಿಸುವ ಮೂಲಕ ಭೌತಿಕ ನೆಲೆಯನ್ನು ಬಿಟ್ಟು ಹೋಗುತ್ತಿರುವ ಆ ಸಂದರ್ಭದಲ್ಲಿ ಆವರೆಗೆ ತಮ್ಮ ಸೇವೆ ಮಾಡಿದ ಎಲ್ಲರಿಗೂ ಧನ್ಯವಾದವನ್ನು ಹೇಳಿದ್ದರು. ಆ ರಾತ್ರಿ ೮ ಗಂಟೆ ೧೭ ನಿಮಿಷಗಳ ಹೊತ್ತಿಗೆ ಅವರ ಪ್ರಾಣಪಕ್ಷಿ ಹಾರಿ ಹೋಯಿತು. ಅದೇ ಹೊತ್ತಿಗೆ ಆಕಾಶದಲ್ಲಿ ಪ್ರಕಾಶಮಾನವಾದ ಜ್ಯೋತಿಯೊಂದು ದಕ್ಷಿಣ ದಿಕ್ಕಿನಿಂದ ಅರುಣಾಚಲ ಬೆಟ್ಟದ ದಿಕ್ಕಿಗೆ ಹಾದು ಹೋದುದನ್ನು, ದೂರದ ಊರಿನಲ್ಲಿದ್ದವರೂ ಹಲವರು ಕಂಡರು. ಕಂಡು ಭಗವಾನರ ಅಂತಿಮ ದರ್ಶನಕ್ಕಾಗಿ ತಿರುವಣ್ಣಾಮಲೈ ಕಡೆ ಧಾವಿಸಿ ಬಂದರು.

ಆಧುನಿಕ ಕಾಲದಲ್ಲಿ ಭಾರತ ಕಂಡ ಅತ್ಯುನ್ನತ ಆಧ್ಯಾತ್ಮಿಕ ಸಾಧನೆಯ ಮಹಾಪುರುಷನೊಬ್ಬನ ಲೌಕಿಕ ಯಾತ್ರೆ ಹೀಗೆ ಕೊನೆಗೊಂಡಿತು. ಮಾತೃಭೂತೇಶ್ವರ ದೇವಸ್ಥಾನದ ಬಳಿಯೇ–ಅದಕ್ಕೆ ಆತುಕೊಂಡಂತೆಯೇ–ರಮಣರ ಸಮಾಧಿಯನ್ನು ಸ್ಥಾಪಿಸಲಾಗಿದೆ. ರಮಣಾಶ್ರಮವೀಗ ರಮಣರು ದೇಹ ರೂಪಿಯಾಗಿದ್ದಾಗ ಸೆಳೆದಷ್ಟೇ–ಬಹುಶಃ ಅದಕ್ಕಿಂತಲೂ ಹೆಚ್ಚು–ಭಕ್ತರನ್ನು ಸೆಳೆಯುತ್ತಿದೆ. ವರ್ಷದಾದ್ಯಂತ ಈ ಲೇಖಕನ ಕುಟುಂಬವೂ ಸೇರಿದಂತೆ ಸಾವಿರಾರು ಭಕ್ತರು ದೇಶ–ವಿದೇಶಗಳಿಂದ ಬಂದು ಅರುಣಾಚಲ ಬೆಟ್ಟದ ತಪ್ಪಲಲ್ಲಿರುವ ರಮಣ ಮಹರ್ಷಿಗಳ ಸಮಾಧಿಯ ಬಳಿ ಶಾಂತಿಯನ್ನನುಭವಿಸಿ ತೆರಳುತ್ತಾರೆ.

ಅನುಬಂಧ:

ರಮಣರೊಡನೆಯ ಕೆಲವು ಪ್ರಶ್ನೋತ್ತರಗಳು:

(ಇವು ಮುಖ್ಯವಾಗಿ 'ರಮಣರೊಡನೆ ಮಾತುಕತೆ' ಸಂಪುಟಗಳಲ್ಲಿ ದಾಖಲಾಗಿರುವ ರಮಣರನ್ನು ಅವರ ದೇಶ ವಿದೇಶಗಳ ಭಕ್ತರು ವಿವಿಧ ಕಾಲಘಟ್ಟಗಳಲ್ಲಿ ವಿವಿಧ ವಿಷಯಗಳ ಬಗ್ಗೆ ಕೇಳಿದ ಪ್ರಶ್ನೆಗಳು ಮತ್ತು ಅವುಗಳಿಗೆ ಅವರು ನೀಡಿದ ಉತ್ತರಗಳಿಂದ ಆಯ್ದ ಭಾಗಗಳ ಕನ್ನಡಾನುವಾದ. ಇವುಗಳ ಓದಿನ ಮೂಲಕ ರಮಣರ ಚಿಂತನೆ ಯಾರಿಗೇ ಆಗಲಿ ಪೂರ್ಣ ಸ್ಪಷ್ಟವಾಗುವುದೆಂದು ನಾನು ಹೇಳಲಾರೆ. ಹಾಗೆ ನೋಡಿದರೆ ಇಡೀ ರಮಣ ಸಾಹಿತ್ಯವನ್ನು ಓದಿಕೊಂಡರೂ ಅದಾಗದು. ಏಕೆಂದರೆ ಓದಿನಿಂದ ಅನುಭಾವ ದೊರಕದು. ಆದರೆ ಈ ಜಗತ್ತು ಮತ್ತು ಅದರ ವಿದ್ಯಮಾನಗಳನ್ನು ಕುರಿತ ನಮ್ಮ ಆಸಕ್ತಿ, ಕುತೂಹಲ, ಆಶ್ಚರ್ಯ ಮತ್ತು ಪ್ರಶ್ನೆಗಳಿಗೆ ಈವರೆಗೆ ವಿಜ್ಞಾನ ಲೋಕದಿಂದ ಕೇಳಿಬಂದಿರುವ ಪ್ರತಿಕ್ರಿಯೆಗಳಿಗೆ ಸಂವಾದಿಯಾಗಿ ಭಗವಾನ್ ರಮಣ ಮಹರ್ಷಿಗಳಿಂದ ಬಂದಿರುವ ಪ್ರತಿಕ್ರಿಯೆಗಳನ್ನು ಅವಲೋಕಿಸಿದಾಗ ನಮ್ಮ ಲೋಕದೃಷ್ಟಿಗೆ ಒಂದು ಹೊಸ ಹದ ಮತ್ತು ಸಮತೋಲನ ದೊರಕಬಹುದೆಂಬ ಆಶಯದಿಂದ ರಮಣ ಮೀಮಾಂಸೆಯ ಈ ಒಂದು ಸಂಕ್ಷಿಪ್ತ ಕ್ರೋಢೀಕರಣದ ಪ್ರಯತ್ನ ಮಾಡಲಾಗಿದೆ.

ಭಕ್ತರ ಪ್ರಶ್ನೆ/ಮಾತುಗಳನ್ನು ದಪ್ಪಕ್ಷರಗಳಲ್ಲೂ, ಭಗವಾನರ ಉತ್ತರ/ ಪ್ರತಿಕ್ರಿಯೆಗಳನ್ನು ಸಾಮಾನ್ಯ ಗಾತ್ರದ ಅಕ್ಷರಗಳಲ್ಲೂ ಇಲ್ಲಿ ನೀಡಲಾಗಿದೆ–ಲೇಖಕ

ಆತ್ಮ ವಿಚಾರವೆಲ್ಲ ಏಕೆ ಬೇಕು?

ಆತ್ಮವಿಚಾರ ಮಾಡದಿದ್ದಲ್ಲಿ ಲೋಕ ವಿಚಾರ ನುಸುಳುವುದು. ನಿಜವಾಗಿ ಇರುವುದನ್ನು ಬಿಟ್ಟು ನಿಜವಾಗಿ ಇಲ್ಲದ್ದನ್ನು ಅರಸತೊಡಗಿದಾಗ ಅಶಾಂತಿ ಆರಂಭವಾಗುತ್ತದೆ. ಯಾವುದು ನಿಜವಾಗಿ ಇರುವುದೋ ಅದನ್ನು ಕಂಡಾಗ, ಆ ಕಾಣುವಿಕೆಯಲ್ಲಿ ನೀವು ಶಾಂತಿ ಪಡೆಯುವಿರಿ.

ಸಂತೋಷ ದುಃಖಗಳೆಂಬುವು ಅಹಂಕಾರದ ಸ್ವಭಾವಗಳು. ಆತ್ಮವಿಚಾರದ ಮೂಲಕ ನೀವು ನಿಜವಾಗಿ ಆ ಅಹಂಕಾರವಲ್ಲ ಎಂಬ ಅರಿವು ಉಂಟಾದಾಗ ನಿಮಗೆ ಬಂದು ಹೋಗಿ ಕಾಡುವ ಸಂತೋಷವಾಗಲಿ ದುಃಖವಾಗಲಿ ಎಲ್ಲಿರುತ್ತದೆ? ನಿಮ್ಮ ನಿಜ ಸ್ವರೂಪ ಈ ಎಲ್ಲ ಭಾವಗಳ ಆಚೆಯದು. ಆತ್ಮ ವಿಚಾರದ ಲಾಭ ನಿಮ್ಮ ಅರಿವಿಗೆ ಬರುವುದು ಬದುಕಿನ ಎಲ್ಲ ಕಷ್ಟ ದುಃಖಗಳಿಂದ ಬಿಡುಗಡೆ ಪಡೆಯುವ ರೂಪದಲ್ಲಿ. ನಿಮಗೆ ಇದಕ್ಕಿಂತ ಹೆಚ್ಚಿಗೆ ಇನ್ನೇನು ಬೇಕು?

ಆತ್ಮದ ಅರಿವಿನಲ್ಲಿರುವವನಿಗೆ ಮಾಡಬೇಕಾದದ್ದು ಏನೂ ಉಳಿದಿರುವುದಿಲ್ಲ, ಯಾವ ಆಲೋಚನೆಗಳೂ ಇರುವುದಿಲ್ಲ. ಆಗ ಅನಂತಶಕ್ತಿಯು ಅವನಿಗೆ ಅಗತ್ಯವೆನಿಸುವ ಎಲ್ಲ ಕೆಲಸಗಳನ್ನೂ ತಾನೇ ಮಾಡುತ್ತಾ ಹೋಗುತ್ತದೆ. ಶಾಂತಿ

ಎಂಬುದು ಮನುಷ್ಯನ ಆಂತರಿಕ ಸ್ವಭಾವ. ಅದನ್ನು ನೀವು ನಿಮ್ಮೊಳಗೆ ಕಾಣತೊಡಗಿದರೆ ಅದನ್ನು ನೀವು ಎಲ್ಲದರಲ್ಲಿಯೂ ಕಾಣತೊಡಗುವಿರಿ.

ತಾತ್ಕಾಲಿಕ ಅಧ್ಯಾತ್ಮಿಕ ಅನುಭವಗಳಲ್ಲಿ ಕಾಣಿಸಿಕೊಳ್ಳುವ ಶಾಂತಿ ನಿಮ್ಮೊಳಗೇ ಇದ್ದುದು. ಅದು ನಿಮ್ಮ ಮೇಲೆ ಹೊರಗಿಂದ ತಂದು ಹೊರಿಸಿದುದಲ್ಲ. ಆತ್ಮಾನುಭವ ಅಥವಾ ಆತ್ಮಸಾಕಾತ್ಕಾರವಾದಾಗ ಅದಕ್ಕಾಗಿ ಪಟ್ಟ ಪ್ರಯತ್ನಗಳ ಬಗ್ಗೆ ನಾವೇ ನಗುವ ದಿನ ಬರುತ್ತದೆ. ಏಕೆಂದರೆ ಅದಕ್ಕೆ ಮೊದಲು ಮತ್ತು ಆ ನಂತರ ನಾವೇನಾಗಿದ್ದೆವೋ ಅದು ಒಂದೇ ಎಂದು ನಮಗೆ ಗೊತ್ತಾಗುತ್ತದೆ.

ನಾನು ಅನಂತವಾಗಿರುವುದಾದರೆ ಮಿತಿಯುಳ್ಳವನೂ ಆಗಿರುವುದೇತಕ್ಕೆ?

ನೀವೇ ವಿಶ್ಲೇಷಿಸಿಕೊಳ್ಳಿರಿ. 'ನಾನು'ಯಿಂದ ಆರಂಭಿಸಿ. ನಾನು ಎಂಬುದೇನೆಂದು ತಿಳಿಯಿರಿ. ಆಗಲೂ ಈ ಪ್ರಶ್ನೆ ಉಳಿದಿದ್ದರೆ ಪರಿಶೀಲಿಸಿ;ಆದರೆ ಅದಕ್ಕೆ ಮೊದಲಲ್ಲ.

ಆತ್ಮಜ್ಞಾನ ಪಡೆಯುವುದು ಹೇಗೆ?

ಆತ್ಮ ನಿತ್ಯಸ್ಥವಾಗಿರುವುದರಿಂದ ಅದರ ಜ್ಞಾನವನ್ನು ಪಡೆಯುವುದೆಂಬುದಿಲ್ಲ. ಅದು ಹೊಸತಾಗಿ ಪಡೆಯುವಂತಹ ಜ್ಞಾನವಲ್ಲ. ಅದರ ಜ್ಞಾನಕ್ಕೆ ಅಜ್ಞಾನವೆಂಬ ತಡೆಯಿದ್ದು, ಅದು ಸರಿದುಹೋದಾಗ ಜ್ಞಾನ ತಾನೇ ತಾನಾಗಿ ಹೊಳೆಯುತ್ತದೆ. ಆದರೆ ಒಂದು ವಿಷಯ: ಈ ಜ್ಞಾನ-ಅಜ್ಞಾನಗಳೆಂಬುವು ಆತ್ಮದಲ್ಲಿಲ್ಲ. ಅವು ಸ್ವಚ್ಛಗೊಳಿಸಬೇಕೊಳ್ಳಬೇಕಾದ ಆಂತರಿಕ ಸ್ರಾವಗಳಿದ್ದಂತೆ. ಹಾಗಾಗಿ ಆತ್ಮ ಎಂಬುದು ಅಜ್ಞಾನ ಮತ್ತು ಜ್ಞಾನಗಳ ಆಚೆನದು. ಅದು 'ಸ್ವ'ವಾಗಿ ತಾನಿರುವಂತೆ ಇದೆ-ಅಷ್ಟೆ.

ಆತ್ಮ ವಿಚಾರ ಮತ್ತು ಧ್ಯಾನಕ್ಕೂ ಇರುವ ವ್ಯತ್ಯಾಸಗಳೇನು?

ಅಹಂಕಾರವನ್ನು ಉಳಿಸಿಕೊಂಡಿದ್ದಾಗ ಮಾತ್ರ ಧ್ಯಾನ ಸಾಧ್ಯ. ಅಲ್ಲಿ ಅಹಂಕಾರ ಮತ್ತು ಯಾವುದರ ಮೇಲೆ ಧ್ಯಾನ ಮಾಡಲಾಗುವುದೋ ಆ ವಸ್ತು ಇರುತ್ತದೆ. ಈ ವಿಧಾನ ಪರೋಕ್ಷವಾದದ್ದು. ಆದರೆ ನಾವು ಅಹಂನ ಮೂಲ ಹುಡುಕ ಹೊರಟಾಗ ಅಹಂ ಕಾಣೆಯಾಗತೊಡಗುತ್ತದೆ. ಆಗ ಉಳಿಯುವುದೇ ಆತ್ಮ.

ಮನಸ್ಸು ಚಂಚಲ. ಅಲ್ಲಿಲ್ಲಿ ಅಲೆದಾಡುತ್ತಿರುತ್ತದೆ. ಅದನ್ನು ನಿಯಂತ್ರಿಸುವುದು ಹೇಗೆ?

ಈ ಅಲೆದಾಟ ಯಾರದ್ದು ಎಂಬ ಪ್ರಶ್ನೆಯ ಕಡೆ ನಿಮ್ಮ ಮನಸ್ಸನ್ನು ಏಕಾಗ್ರಗೊಳಿಸಿದರೆ ಮನಸ್ಸು ಅಲೆದಾಟವನ್ನು ನಿಲ್ಲಿಸುತ್ತದೆ.

ಹಾಗಾದರೆ ಆಲೋಚನೆಗಳೆಂಬುವು ನಿಜವಲ್ಲವೆ?

ಹೌದು. ಮನಸ್ಸು ಎಂಬುದು ಪ್ರಜ್ಞೆ ಅಥವಾ ಆತ್ಮದಲ್ಲಿ ಹುಟ್ಟುವ ಆಲೋಚನೆಗಳ ಸಮೂಹವಷ್ಟೆ. ಆಲೋಚನೆಗಳಿಗೆ ನಿಜತ್ವವಿಲ್ಲ. ನಿಜವಾದುದು ಆತ್ಮ ಮಾತ್ರ.

ಮನಸ್ಸು ಎನ್ನುವುದು ಒಂದು ಹುಸಿ ರಚನೆ. ಅದು 'ನಾನು' ಎಂಬ ಆಲೋಚನೆಯಿಂದ ಉದಿಸುತ್ತದೆ ಇದರ ಹಿಂದೆ ಸದಾ ಉಳಿದಿರುವ-ಅಂದರೆ ಆಲೋಚನೆಗಳಿಂದ ಮುಕ್ತವಾದ-ಹಿನ್ನೆಲೆಯೇ ಆತ್ಮ. ಆಲೋಚನೆಗಳಿಲ್ಲದ ಪರಿಶುದ್ಧತೆಯಲ್ಲಿರುವ ಮನಸ್ಸೇ ಆತ್ಮ. ಕರ್ಪೂರ ಉರಿದಾಗ ಏನೂ ಉಳಿದಿರುವುದಿಲ್ಲ.

ಮನಸ್ಸು ಕರ್ಪೂರ. ಅದು ಚೂರೂ ಅವಶೇಷವಿಲ್ಲದಂತೆ ಉರಿದು ಆತ್ಮವಾಗಿ ಕರಗಿ ಹೋಗುವುದೇ ಆತ್ಮ ಸಾಕ್ಷಾತ್ಕಾರ.

ಈ ವಿಶ್ವದ ಹುಟ್ಟಿಗೆ ಕಾರಣವೇನು?

ಏಕೆ ನಿಮಗೆ ನಿಮ್ಮದೇ ಚಿಂತೆಗಳಿಲ್ಲವೇ?

ಓ! ಇದೆ. ಹಾಗಾಗಿಯೇ ನಾನು ಜೀವ, ಜಗತ್ತು, ಸಾವು, ಪ್ರಜ್ಞೆ ಇತ್ಯಾದಿಗಳ ಬಗ್ಗೆ ತಿಳಿಯಬಯಸಿರುವುದು.

ಆರಂಭದಿಂದ ಆರಂಭಿಸಿ. ಜೀವ, ಪ್ರಜ್ಞೆ ಇವೆಲ್ಲ ಇರುವುದು ಯಾರಿಗೆ? ಉದಾಹರಣೆಗೆ ನಿಮಗೆ ಜೀವ ಇದೆಯೆ?

ಮತ್ತೆ! ನನ್ನ ದೇಹ ನನಗೆ ಕಾಣಿಸುತ್ತಿದ್ದು ನಾನು ಜೀವಿಸಿರುವುದು ನನಗೆ ಗೊತ್ತಿದೆ.

ನೀವು ಯಾವಾಗಲೂ ನಿಮ್ಮ ದೇಹವನ್ನು ಕಾಣುತ್ತಿರುವಿರಾ? ಉದಾಹರಣೆಗೆ, ನೀವು ನಿದ್ದೆಗೆ ಸರಿದಾಗ ದೇಹಕ್ಕೆ, ವಿಶ್ವಕ್ಕೆ ಏನಾಗುತ್ತದೆ?

ನನಗೆ ಗೊತ್ತಿಲ್ಲ. ಅದೊಂದು ರಹಸ್ಯ.

ಅವಕ್ಕೆ ಏನಾಗುತ್ತದೆಂಬುದು ನಿಮಗೆ ಗೊತ್ತಾಗದಿರಬಹುದು. ಆದರೆ ನಿಮ್ಮ ಇರವು ಇರುವುದಿಲ್ಲವೆ?

ನನಗೆ ಗೊತ್ತಿಲ್ಲ.

ಆಯಿತು. ಈಗ ನೀವು ಇರುವುದು ನಿಮಗೆ ಹೇಗೆ ಗೊತ್ತು?

ನನಗೆ ಈಗ ಅರಿವಿದ್ದು ನನ್ನ ದೇಹ ಚಲಿಸುತ್ತಿರುವುದು, ಚಿಂತಿಸುತ್ತಿರುವುದು ನನಗೆ ಗೊತ್ತಾಗುತ್ತಿದೆ.

ಹಾಗೇ ನೀವು ಈಗ ತಿರುವಣ್ಣಾಮಲೈನಲ್ಲಿ ನಿದ್ರಿಸುತ್ತಿರುವಾಗ ಕನಸಿನಲ್ಲಿ ನಿಮ್ಮ ದೇಹ ಎಲ್ಲೆಲ್ಲೋ ಓಡಾಡುತ್ತಾ ಏನೇನನ್ನೋ ಚಿಂತಿಸುತ್ತಿರುವುದೂ ಗೊತ್ತಾಗುತ್ತದೆ ಅಲ್ಲವೇ?

ನಿಜವಾಗಲೂ ಅದೊಂದು ರಹಸ್ಯ. ಹೀಗೆ ಹೇಳಬಹುದೇ: ಎಂದಿಗೂ ಇರುವಂತಹ ಶಾಶ್ವತವಾದ ನಾನು ಎಂಬುದು ಅಹಂ ರೂಪದಲ್ಲಿ ಬದಲಾಗುತ್ತಿರುತ್ತದೆ?

ಹಾಗಾದರೆ ನೀವು ಇಬ್ಬರು ವ್ಯಕ್ತಿಗಳೆಂದು ಹೇಳುತ್ತಿರುವಿರಿ? ಶಾಶ್ವತವಾದ ನಾನು ಮತ್ತು ಅಹಂ ರೂಪದ ನಾನು?

ದಯವಿಟ್ಟು ನನಗೆ ಸತ್ಯದರ್ಶನದ ದಾರಿ ತೋರಿಸಿರಿ.

ಸತ್ಯವಾದದ್ದು ಎಂದರೆ ಎಂದೆಂದಿಗೂ ಇರುವಂತಹದ್ದು. ಸಿನಿಮಾ ಚಿತ್ರಗಳು ಮೂಡುವ ತೆರೆಯಂತೆ. ಚಿತ್ರಗಳು ಬೀಳುತ್ತಿರುವಾಗ ಅದು ಕಾಣುವುದಿಲ್ಲ. ಚಿತ್ರ ಬಿಡುವುದನ್ನು ನಿಲ್ಲಿಸಿ, ಯವಾಗಲೂ ಇರುವ–ವಾಸ್ತವವಾಗಿ ಎಂದೆಂದಿಗೂ ಇರುವ ಏಕ ಮಾತ್ರ ವಸ್ತು–ಸ್ಪಷ್ಟವಾಗಿ ಕಾಣತೊಡಗುತ್ತದೆ. ಈ ವಿಶ್ವ, ಈ ಜೀವಗಳು, ಆಲೋಚನೆಗಳು ಮತ್ತು ಘಟನೆಗಳು ಆತ್ಮವೆಂಬ ತೆರೆಯ ಮೇಲೆ ಮೂಡಿ ಹೋಗುವ ಚಿತ್ರಗಳು.

ಓ ಮಹರ್ಷಿ, ನೀವು ನನಗೆ ಆತ್ಮಸಾಕ್ಷಾತ್ಕಾರವನ್ನು ದಯಪಾಲಿಸುವುದಾರೆ ನಾನು ನಿಮಗೆ ಚಿರಋಣಿಯಾಗಿರುತ್ತೇನೆ.

(ಮುಸಿ ನಗುವಿನೊಂದಿಗೆ) ಹು...ಹೂಂ...

ಹೌದು, ನನಗೆ ನಿಜವಾಗಿಯೂ ತುಂಬಾ ಸಂತೋಷವಾಗುತ್ತದೆ. ನಾನು ನಾಳೆ ಇಲ್ಲಿಂದ ಹೊರಡುತ್ತಿದ್ದೇನೆ. ನಿಮ್ಮನ್ನು ಯಾವಾಗಲೂ ನೆನಪಿಸಿಕೊಳ್ಳುತ್ತಿರುತ್ತೇನೆ.

(ಮುಸಿನಗುವನ್ನು ಮುಂದುವರೆಸಿ) ನೀವು ಎಂದೂ ಹೊರಡುವುದಿಲ್ಲ.

(ಭಗವಾನರು ಸಿದ್ಧಿಗಳನ್ನು ಬಳಸಿ ತನ್ನನ್ನು ಹೋಗದಂತೆ ತಡೆಯುವರೆಂದು ಬಹು ಹೆದರಿ): ಹೇಗೆ?ನಾನು ಖಂಡಿತ ಹೊರಟಿರುವೆ. ಅಮೆರಿಕಾದಲ್ಲಿ ನನಗೆ ತುರ್ತು ಕೆಲಸವಿದೆ. ನನ್ನ ಪಾಸ್‌ಪೋರ್ಟ್ ಸಿದ್ಧವಾಗಿದ್ದು, ಟಿಕೆಟ್ ಕೂಡಾ ಖಚಿತವಾಗಿದೆ. ಪ್ರಯಾಣದ ನನ್ನ ಎಲ್ಲ ಸಿದ್ಧತೆಗಳೂ ಮುಗಿದಿದ್ದು, ಈಗ ನಾನು ಹೊರಡುವುದಿಲ್ಲ ಎಂದರೇನು?

ನೀವು ಎಂದೂ ಹೊರಡುವುದಿಲ್ಲ. ಏಕೆಂದರೆ ನೀವು ಎಂದೂ ಬಂದಿಲ್ಲ. ಕಾರು, ಹಡಗು, ರೈಲು ಇತ್ಯಾದಿಗಳು ಬಂದುವಷ್ಟೆ ನಿಮಗೆ ನೀವು ಇಲ್ಲಿ ಕಾಣಿಸಿಕೊಳ್ಳುವವರೆಗೆ ನೀವು ನಿಜವಾಗಿ ಏನನ್ನೂ ಮಾಡದೆ ಸುಮ್ಮನೆ ಕೂತಿದ್ದಿರಿ, ಅಷ್ಟೆ,

(ನಿಟ್ಟುಸಿರಿನ ಮುಗುಳ್ನಗೆಯೊಂದಿಗೆ): ಓ! ಹಾಗಾ!

ಆತ್ಮವಿಚಾರಕ್ಕೆ ಏಕಾಂತ ಅಗತ್ಯವೇ?

ಏಕಾಂತತೆ ಎಲ್ಲ ಕಡೆ ಇದೆ. ವ್ಯಕ್ತಿ ಯಾವಾಗಲೂ ಏಕಾಂಗಿಯೇ..ಅದನ್ನು ನಮ್ಮೊಳಗೆ ಕಂಡುಕೊಳ್ಳಬೇಕೇ ಹೊರತು ಹೊರಹಲ್ಲ. ಏಕಾಂತ ಇರುವುದು ಮನಸ್ಸಿನಲ್ಲಿ.

ಜಗತ್ತೇಕೆ ಇಷ್ಟು ದುಃಖಮಯವಾಗಿ ಸೃಷ್ಟಿಯಾಗಿದೆ?

ಜಗತ್ತಿನ ಸುದ್ದಿ ಇರಲಿ. ನೀವು ಸುಖಿಯೇ? ನಿಮ್ಮ ಕಣ್ಣುಗಳು ತಮ್ಮನ್ನು ತಾವು ನೋಡಿಕೊಳ್ಳಲಾರವು. ಹಾಗೆ ನೋಡಿಕೊಳ್ಳಲು ಕನ್ನಡಿ ಬೇಕು. ಜಗತ್ತು ನಿಮ್ಮ ಕನ್ನಡಿ ಇದ್ದಂತೆ. ನಿಮ್ಮ ದುಃಖ ಜಗತ್ತಿನಲ್ಲಿ ಪ್ರತಿಫಲಿತವಾಗುತ್ತಿದೆಯಷ್ಟೆ, ಹಾಗಾಗಿ ಜಗತ್ತು ಹೀಗೆ ಕಾಣುವುದು ನಿಮ್ಮ ದುಃಖದ ಕಡೆ ನಿಮ್ಮ ಗಮನ ಸೆಳೆಯಲೆಂದು.

ಸಾವಿನ ಭಯಂಕರ ಭಯವನ್ನು ನಿವಾರಿಸಿಕೊಳ್ಳುವುದು ಹೇಗೆ?

ಆ ಭಯ ನಿಮ್ಮನ್ನು ಯಾವಾಗ ಆವರಿಸುತ್ತದೆ? ಅದು ನೀವು ನಿಮ್ಮ ದೇಹವನ್ನು ನೋಡಲಾಗದಿದ್ದಾಗ, ಉದಾಹರಣೆಗೆ ನೀವು ಗಾಢ ನಿದ್ರೆಯಲ್ಲಿದ್ದಾಗ ಅಥವಾ ಅರವಳಿಕೆಯಲ್ಲಿದ್ದಾಗ ಆವರಿಸುತ್ತದೆಯೇ? ಅದು ನೀವು ಸಂಪೂರ್ಣ 'ಎಚ್ಚರ'ದಲ್ಲಿದ್ದು ನಿಮ್ಮ ದೇಹವೂ ಸೇರಿದಂತೆ ಲೋಕವನ್ನು ನೋಡುವಂತಿರುವಾಗ ಮಾತ್ರ ಕಾಡುತ್ತದೆ. ನೀವು ಇದನ್ನು ನೋಡದಿದ್ದರೆ, ಕನಸುಗಳಿಲ್ಲದ ಗಾಢ ನಿದ್ರೆಯಲ್ಲಿರುವಂತೆ ಶುದ್ಧ ಆತ್ಮರೂಪದಲ್ಲಿದ್ದರೆ ಯಾವ ಭಯವೂ ನಿಮ್ಮನ್ನು ಮುಟ್ಟಲಾರದು

ಯಾವ ವಸ್ತುವಿನ ಇಲ್ಲದಿರುವಿಕೆ ಈ ಭಯದ ಮೂಲವಾಗಿದೆಯೋ ಅದನ್ನು ನೀವು ಪತ್ತೆಮಾಡುವಿರಾದರೆ, ಆ ವಸ್ತು ದೇಹವಲ್ಲ:ಬದಲಿಗೆ ಅದರೊಳಗಿರುವ-ನೋಟ, ಶಬ್ದ, ವಾಸನೆ ಮುಂತಾದವುಗಳ ಮೊತ್ತವಾದ ಆಕರ್ಷಕ ಜಗತ್ತನ್ನು ಗ್ರಹಿಸುವ-ಮನಸ್ಸು ಎಂಬುದು ನಿಮಗೆ ಗೊತ್ತಾಗುತ್ತದೆ. ನಿರಂತರ ಅರಿವಿನ ಖಚಿತ ಭರವಸೆ ಇದ್ದಲ್ಲಿ ಬಹಳ ಜನ ರೋಗಬಾಧೆಗಳಿಗೆ ಒಳಗಾಗುವ ಈ ದೇಹದಿಂದಲೂ,

ಅದರಿಂದ ಉಂಟಾಗುವ ಸಮಸ್ಯೆ ಮತ್ತು ಅಸುಖಿಗಳಿಂದಲೂ ಮುಕ್ತರಾಗಲು ಬಯಸಿಯಾರು. ಆದ್ದರಿಂದ ಅವನು ಭಯಪಡುವುದು ದೇಹ ಕಳೆದುಕೊಳ್ಳುವೆನೆಂದಲ್ಲ; ಇರವಿನ ಅರಿವನ್ನು, ಪ್ರಜ್ಞೆಯನ್ನು ಕಳೆದುಕೊಳ್ಳುವೆನೆಂದು. ಹಾಗಾಗಿ ಈಗಲೇ ಈ ದೇಹದಲ್ಲಿರುವಾಗ ಶುದ್ಧ ಈ ಇರವಿನ ಅರಿವನ್ನು ಗಟ್ಟಿಯಾಗಿ ಹಿಡಿದು ಎಲ್ಲ ಭಯಗಳಿಂದ ಯಾಕೆ ಮುಕ್ತವಾಗಬಾರದು?

ಸಾವು ಮತ್ತು ಪುನರ್ಜನ್ಮಗಳ ನಡುವೆ ಐವತ್ತರಿಂದ ಹತ್ತು ಸಾವಿರ ವರ್ಷಗಳ ಅಂತರ ಇರುವುದೆಂದು *ಥಿಯೋಸಫಿಸ್ಟರು* ಹೇಳುತ್ತಾರಲ್ಲಾ?

ಪ್ರಜ್ಞೆಯ ಒಂದು ಮತ್ತು ಇನ್ನೊಂದು ಅವಸ್ಥೆಗಳಿಗೆ ಸಂಬಂಧಿಸಿದಂತೆ ಅಳತೆಯ ಒಂದೇ ಮಾನದಂಡವಿಲ್ಲ. ಅಂತಹ ಎಲ್ಲ ಅಳತೆಗಳೂ ಊಹಾತ್ಮಕವು. ಕೆಲವು ಜೀವಿಗಳು ಹೆಚ್ಚು ಕಾಲ ಮತ್ತು ಇನ್ನು ಕೆಲವು ಜೀವಿಗಳು ಕಡಿಮೆ ಕಾಲ ತೆಗೆದುಕೊಳ್ಳುತ್ತವೆಂಬುದು ನಿಜ. ಆದರೆ ಮುಖ್ಯವಾಗಿ ಅರಿತಿರಬೇಕಾದು ಏನೆಂದರೆ, ಹೋಗುವುದು ಬರುವುದನ್ನು ಮಾಡುವುದು ಆತ್ಮವಲ್ಲ, ಹಾಗೇ ಕಾಣುವಂತೆ ಮಾಡುವ ಆಲೋಚಿಸುವ ಮನಸ್ಸು. ಯಾವದೇ ಪಾತಳಿಯಲ್ಲಿ ಮನಸ್ಸು ಕೆಲಸ ಮಾಡಲಿ, ಅದು ತನಗಾಗಿ ದೇಹವೊಂದನ್ನು ಸೃಷ್ಟಿಸಿಕೊಳ್ಳುತ್ತದೆ- ಭೌತ ಜಗತ್ತಿನಲ್ಲಿ ಭೌತ ದೇಹವನ್ನು, ಕನಸಿನ ಲೋಕದಲ್ಲಿ ಕನಸಿನ ಮಳೆಯಲ್ಲಿ ತೊಯ್ಯುವ ಮತ್ತು ಕನಸಿನ ರೋಗದಿಂದ ನರಳುವ ಕನಸಿನ ದೇಹವನ್ನು. ಭೌತಿಕ ದೇಹದ ಸಾವಿನ ನಂತರ ಮನಸ್ಸು ಸ್ವಲ್ಪ ಕಾಲ ಕನಸಿಲ್ಲದ ನಿದ್ರೆಯಲ್ಲಿರುವಂತೆ ಲೋಕರಹಿತವಾಗಿ; ಹಾಗಾಗಿ ದೇಹರಹಿತವಾಗಿ ನಿಷ್ಕ್ರಿಯವಾಗಿರುತ್ತದೆ. ಆದರೆ ಯಾವುದನ್ನು ಪುನರ್ಜನ್ಮ ಎಂದು ಕರೆಯಲಾಗುವುದೋ ಅದರಲ್ಲಿ ದೇಹವೊಂದನ್ನು ಆವಾಹಿಸಿಕೊಳ್ಳುವವರೆಗೆ ಅದು ಬೇಗ ಹೊಸದೊಂದು ಲೋಕದಲ್ಲಿ ಮತ್ತು ಹೊಸದೊಂದು ದೇಹದಲ್ಲಿ- ಸೂಕ್ಷ್ಮ ಪಾತಳಿಯದ್ದು-ಕ್ರಿಯಾತ್ಮಕವಾಗುತ್ತದೆ. ಆದರೆ ಆತ್ಮಸಾಕ್ಷಾತ್ಕಾರ ಮಾಡಿಕೊಂಡ ಜ್ಞಾನಿಯ ಮನಸ್ಸು ಕೆಲಸ ಮಾಡುವುದನ್ನು ನಿಲ್ಲಿಸಿರುವುದರಿಂದ ಸಾವು ಅದನ್ನು ಏನೂ ಮಾಡಲಾಗದು: ಹುಟ್ಟು ಸಾವುಗಳನ್ನು ಉಂಟು ಮಾಡಲು ಉದಯವಾಗದಂತೆ ಮನಸ್ಸು ಅಸ್ತಮಿಸಿ ಹೋಗಿರುತ್ತದೆ.

ಈಗ ನಿಜವಾದ ಹುಟ್ಟೂ ಇಲ್ಲ, ನಿಜವಾದ ಸಾವೂ ಇಲ್ಲವೆಂಬುದು ಸ್ಪಷ್ಟ. ಈ ಪ್ರಕ್ರಿಯೆಯಲ್ಲಿ ನಿಜತ್ವದ ಭ್ರಮೆ ಉಂಟಾಗುವುದು ಆತ್ಮ ಸಾಕ್ಷಾತ್ಕಾರವಿಲ್ಲದೆ ನಾಶವಾಗದಿರುವ ಮನಸ್ಸೇ.

ಬದುಕುವ, ಮತ್ತೆ ಹುಟ್ಟಲು ಬಯಸುವ ಈ *ತನ್ಹಾ(ತೃಷ್ಣೆ-ದಾಹ)*ಕ್ಕೆ ಕಾರಣವೇನು?

ನಿಜವಾದ ಪುನರ್ಜನ್ಮವೆಂದರೆ ಅಹಂ-ಭಾವದಿಂದ ಮಹಾಚೈತನ್ಯದೊಳಕ್ಕೆ ಸಾಯುವುದು. ಏಸುವಿನ ಶಿಲುಬೆಗೇರಿದ್ದರ ಗೂಢಾರ್ಥವೂ ಇದೇ. ದೇಹದೊಡನೆ ಗುರುತಿಸಿಕೊಳ್ಳುವ ಬಯಕೆ ಇದ್ದಲ್ಲಿ, ಒಂದಲ್ಲ ಒಂದು ಪಾತಳಿಯಲ್ಲಿ ಒಂದಲ್ಲ ಒಂದು ದೇಹ ಸಿಕ್ಕೇ ಸಿಗುತ್ತದೆ. ದೇಹ ಭಾವ ಮೂಲದಲ್ಲಿ, ಮಹಾಚೈತನ್ಯದಲ್ಲಿ ಅಥವಾ ಆತ್ಮದಲ್ಲಿ ಲೀನವಾಗುವವರೆಗೆ. ಮೇಲಕ್ಕೆ ಎಸೆಯಲ್ಪಟ್ಟ ಕಲ್ಲು ತನ್ನ ಮೂಲ ಭೂಮಿಗೆ ಬಂದು

ವಿರಮಿಸುವವರೆಗೆ ನಿರಂತರ ಚಲನೆಯಲ್ಲಿರುತ್ತದೆ. ತಲೆನೋವು, ತಲೆನೋವುಪೂರ್ವ ಅವಸ್ಥೆಯನ್ನು ಮರಳಿಪಡೆಯುವವರೆಗೆ ತೊಂದರೆ ಕೊಡುತ್ತಲೇ ಇರುತ್ತದೆ.

ಬದುಕುವ ದಾಹ ಬದುಕಿನ, ಅಂದರೆ ನಿರಪೇಕ್ಷ ಅಸ್ತಿತ್ವದ-ಸತ್‌ನ-ಮೂಲ ಸ್ವಭಾವ. ಅದು ಸ್ವಭಾವತಃ ಅವಿನಾಶಿಯಾದರೂ, ನಶ್ವರವಾದ ಸಾಧನ ಅಂದರೆ ದೇಹದೊಂದಿಗೆ ತಪ್ಪಾಗಿ ಗುರುತಿಸಿಕೊಳ್ಳುವ ಮೂಲಕ ನಾಶ ಹೊಂದುವ ಹುಸಿ ಆತಂಕದಲ್ಲಿದ್ದು, ಆ ಗುರುತನ್ನು ಶಾಶ್ವತ ಮಾಡಿಕೊಳ್ಳಲು ಹೆಣಗುತ್ತಾ ಹುಟ್ಟು-ಮರುಹುಟ್ಟುಗಳ ಸರಣಿಗೇ ಕಾರಣವಾಗುತ್ತದೆ. ಈ ದೇಹಗಳು ಎಷ್ಟೇ ಕಾಲವಿರಲಿ, ಅವು ಒಂದಲ್ಲ ಒಂದು ದಿನ ಮುಗಿತಾಯ ಕಂಡು, ಯಾವುದು ಏಕೈಕವಾಗಿ ಅನವರತ ಇರುವುದೋ ಆ ಆತ್ಮನಿಗೆ ದಾರಿ ಮಾಡಿಕೊಡಲೇಬೇಕು.

ದೇವರನ್ನು ಕಾಣುವುದು ಹೇಗೆ?

ನಮ್ಮೊಳಗೇ. ಮನಸ್ಸನ್ನು ಒಳಕ್ಕೆ ತಿರುಗಿಸಿದರೆ ದೇವರು ಒಳಪ್ರಜ್ಞೆಯಲ್ಲಿ ಕಾಣಿಸಿಕೊಳ್ಳುತ್ತಾನೆ.

ಆದರೆ ದೇವರು ನಮ್ಮ ಸುತ್ತ ಕಾಣುವ ಪ್ರತಿಯೊಂದರಲ್ಲೂ ಇರುವುದಿಲ್ಲವೇ?

ದೇವರು ಎಲ್ಲದರಲ್ಲೂ, ಅದನ್ನು ನೋಡುವವನಲ್ಲೂ ಇರುವನು. ದೇವರನ್ನು ಎಲ್ಲಿ ಕಾಣಲು ಸಾಧ್ಯ? ಆತನನ್ನು ಹೊರಗೆ ಕಾಣಲಾಗುವುದಿಲ್ಲ. ಆತನ ಅನುಭವ ಒಳಗಷ್ಟೇ ಆಗಲು ಸಾಧ್ಯ. ಏಕೆಂದರೆ, ವಸ್ತುಗಳನ್ನು ನೋಡಲು ಮನಸ್ಸು ಅಗತ್ಯ ಮತ್ತು ಅವುಗಳಲ್ಲಿ ದೇವರನ್ನು ಕಾಣುವುದು ಎಂದರೆ ಅದು ಮಾನಸಿಕ ಕೆಲಸವೇ ಆಗುತ್ತದೆ. ಆದರೆ ಮನಸ್ಸು ನಿಜವಲ್ಲದ್ದು. ಹಾಗಾಗಿ ಮನಸ್ಸಿನಿಂದ ಮುಕ್ತಗೊಂಡ ನಮ್ಮೊಳಗಿನ ಪ್ರಜ್ಞೆಯೇ ದೇವರಾಗಿ ಅನುಭವಕ್ಕೆ ಬರುವುದು.

ಈ ದೇವತೆಗಳು ಅನ್ನುತ್ತೇವಲ್ಲ, ಆತ್ಮಕ್ಕೆ ಸಂಬಂಧಿಸಿದಂತೆ ಅವುಗಳ ಸ್ಥಾನಮಾನವೇನು?

ಶಿವ, ಗಣಪತಿ ಇತ್ಯಾದಿ ದೇವರುಗಳು ಬ್ರಹ್ಮನಂತೆ, ಮಾನವ ಪಾತಳಿಯಲ್ಲಿ ಅಸ್ತಿತ್ವ ಪಡೆದಿವೆಯಷ್ಟೆ- ಅಂದರೆ ನಿಮ್ಮ ವೈಯುಕ್ತಿಕ ಆತ್ಮವನ್ನು ನಿಜ ಮತ್ತು ಇದೆಯೆಂದು ಭಾವಿಸಿದಲ್ಲಿ ಅವು ಕೂಡಾ ಇರುತ್ತವೆ. ಸರ್ಕಾರವೊಂದಕ್ಕೆ ತನ್ನ ಆಡಳಿತ ನಡೆಸಲು ಹಲವು ಉನ್ನೋತನ್ನತ ಕಾರ್ಯನಿರ್ವಾಹಕ ಅಧಿಕಾರಿಗಳಿದ್ದಂತೆ ಸೃಷ್ಟಿಕರ್ತನಿಗೂ ಇರುವರು. ಆದರೆ ಆತ್ಮಾನುಭವದಲ್ಲಿರುವವನಿಗೆ ಈ ದೇವರುಗಳೆಲ್ಲ ಮಾಯಾ ಕಲ್ಪನೆಗಳಾಗಿದ್ದು ಅವು ಏಕೈಕ ಸತ್ಯದಲ್ಲಿ ಲೀನವಾಗುವುವು.

ಇಷ್ಟೊಂದು ದೇವರಗಳೇಕಿವೆ?

ನಿಮಗಿರುವುದು ಒಂದೇ ದೇಹವಾದರೂ ಅದು ಎಷ್ಟು ಕೆಲಸಗಳನ್ನು ನಿರ್ವಹಿಸುತ್ತದೆ? ಆದರೆ ಈ ಎಲ್ಲ ಕೆಲಸಗಳ ಮೂಲ ಶಕ್ತಿ ಒಂದೇ. ಹಾಗೇ ದೇವರುಗಳಿಗೂ. ಏಕೈಕವನ್ನು ಸಾಕ್ಷಾತ್ಕರಿಸಿಕೊಳ್ಳುವ ಮೂಲಕ ಎಲ್ಲ ದೇವರುಗಳನ್ನೂ ಅರಿಯಬಹುದು.

ದೇವರು ವೈಯುಕ್ತಿಕವೇ?

ಹೌದು ದೇವರು ಯಾವಾಗಲೂ ನಿಮ್ಮ ಮುಂದೆ ನಿಂತಿರುವ ಪ್ರಥಮ ಪುರುಷ ನಾವು ಎಲ್ಲವನ್ನೂ ತ್ಯಜಿಸಿ ದೇವರೊಬ್ಬನೇ ನಮ್ಮ ಮುಂದೆ ನಿಂತಿರುವಂತೆ ಮಾಡಿಕೊಳ್ಳಬೇಕು.

ರಾಮಕೃಷ್ಣರಂತೆ ನಾವೂ ದೇವರು ಅಥವಾ ಈಶ್ವರನೊಡನೆ ಮಾತಾಡಬಹುದೆ?

ನಾವಿಬ್ಬರೂ ಪರಸ್ಪರ ಮಾತನಾಡಲು ಸಾಧ್ಯವಾದರೆ ಈಶ್ವರನೊಂದಿಗೂ ಏಕಾಗಬಾರದು?

ಅದರೆ ನನಗದು ಸಾಧ್ಯವಾಗುತ್ತಿಲ್ಲ.

ಅದಕ್ಕೆ ಮನಸ್ಸಿನ ಶುದ್ಧಿ ಮತ್ತು ಸಾಮರ್ಥ್ಯ ಅಗತ್ಯ. ಹಾಗೇ ಧ್ಯಾನಾಭ್ಯಾಸವೂ.

ಈಶ್ವರ ಮತ್ತು ವಿಷ್ಣುವಿನಂತ ದೇವರುಗಳು ಮತ್ತು ಕೈಲಾಸ ಮತ್ತು ವೈಕುಂಠಗಳಂತಹ ಅವರ ಲೋಕಗಳಿರುವುದು ನಿಜವೇ:?

ನೀವು ನಿಮ್ಮ ದೇಹದಲ್ಲಿರುವುದು ಎಷ್ಟು ನಿಜವೋ ಅಷ್ಟೇ ನಿಜ.

ಅಂದರೆ ಅವು ನನ್ನ ದೇಹದಂತೆ ಐಂದ್ರೀಕ ಅಸ್ತಿತ್ವ ಪಡೆದಿವೆಯೇ? ಅಥವಾ ಬರೀ ಕಟ್ಟು ಕಥೆಗಳೋ?

ಅವೆಲ್ಲ ಇವೆ.

ಹಾಗಿದ್ದರೆ ಅವು ಎಲ್ಲಿಯೋ ಇರಬೇಕು; ಎಲ್ಲಿವೆ ಅವು?

ನಿಮ್ಮೊಳಗೆ.

ಅಂದರೆ ಅವೆಲ್ಲ ನನ್ನ ಕಲ್ಪನೆಗಳಷ್ಟೆ. ನಾನು ಸೃಷ್ಟಿಸಿಕೊಂಡು ನಿಯಂತ್ರಿಸುವ ಕಲ್ಪನೆಗಳು?

ಪ್ರತಿಯೊಂದೂ ಅಷ್ಟೆ.

ವೈಯುಕ್ತಿಕ ದೇವರೆಂಬುವನು ಇದ್ದಾನೆಯೇ?

ಹೌದು, ಈಶ್ವರ.

(ಆಶ್ಚರ್ಯದಿಂದ): ಏನು? ಕಣ್ಣು, ಮೂಗು, ಕಿವಿ ಇತ್ಯಾದಿಗಳೊಂದಿಗೆ?

ಹೌದು, ಅವು ನಿಮಗೆ ಇರುವುದಾದರೆ ದೇವರಿಗೆ ಕೂಡಾ ಯಾಕೆ ಇರಬಾರದು?

ಪುರಾಣಗಳಲ್ಲಿ ದೇವರಿಗೆ ಈ ಅಂಗಗಳು ಇವೆ ಎಂದು ಓದಿದಾಗ ನನಗೆ ನಗು ಬರುತ್ತದೆ.

ನಿಮಗೂ ಅವಿರುವುದರಿಂದ ನಿಮ್ಮನ್ನು ನೋಡಿಕೊಂಡೇ ನೀವೇಕೆ ನಗಬಾರದು?

ನಾವೀಗ ಕಡುಕಷ್ಟ ಕಾಲದಲ್ಲಿ ಬದುಕುತ್ತಿದ್ದು, ಜಗತ್ತಿನ ಭವಿಷ್ಯದ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಯಬಯಸುವೆ.

ಭವಿಷ್ಯದ ಬಗ್ಗೆ ನೀವೇಕೆ ಚಿಂತಿಸುವಿರಿ? ಇವೊತ್ತಿನ ಬಗ್ಗೆಯೇ ನಿಮಗೆ ಸರಿಯಾಗಿ ಗೊತ್ತಿಲ್ಲ. ಇವೊತ್ತಿನ ಬಗ್ಗೆ ಎಚ್ಚರವಾಗಿರಿ. ಭವಿಷ್ಯ ತನ್ನನ್ನು ತಾನು ನೋಡಿಕೊಳ್ಳುತ್ತದೆ.

ಕಷ್ಟದಲ್ಲಿರುವ ಜಗತ್ತಿಗೆ ನಾನೇನಾದರೂ ಸಹಾಯ ಮಾಡಬಹುದಲ್ಲವೇ?

ನಿಮ್ಮನ್ನು ಸೃಷ್ಟಿಸಿದ ಶಕ್ತಿ ಜಗತ್ತನ್ನೂ ಸೃಷ್ಟಿಸಿದೆ. ದೇವರು ಜಗತ್ತನ್ನು ಸೃಷ್ಟಿಸಿರುವುದಾದರೆ, ಅದರ ಉಸಾಬರಿ ಅವನದೇ ಹೊರತು ನಿಮ್ಮದಲ್ಲ.

ಜಗತ್ತಿನಲ್ಲಿ ನಾವು ಇಷ್ಟೊಂದು ದುಃಖವನ್ನು ನೋಡುತ್ತೇವೆ. ಒಬ್ಬ ಮನುಷ್ಯ ಹಸಿದಿದ್ದಾನೆ ಎಂದರೆ ಅದು ಭೌತಿಕ ಸತ್ಯ. ಅವನಿಗೆ ಅದು ಸತ್ಯಸ್ಯ ಸತ್ಯ ಅದನ್ನು ನಾವು ಕನಸೆಂದು ಕರೆದು ಅವನ ಸಂಕಷ್ಟಕ್ಕೆ ಸ್ಪಂದಿಸಲು ಹೋಗಬಾರದೆ?

ಜ್ಞಾನಿ ಅಥವಾ ನಿರಪೇಕ್ಷ ಸತ್ಯದ ದೃಷ್ಟಿಯಿಂದ ನೀವು ಸಂಕಷ್ಟವೆಂದು ಯಾವುದನ್ನು ಗುರುತಿಸುತ್ತಿದ್ದೀರೋ ಅದು, ಈ ಸಂಕಷ್ಟವೂ ಯಾವುದರ ಒಂದು ಅತಿ ಸಣ್ಣ ಭಾಗವಾಗಿದೆಯೋ ಆ ಜಗತ್ತಿನಂತೆ ಒಂದು ಕನಸೇ. ನೀವು ನಿದ್ರೆಯಲ್ಲಿದ್ದಾಗ ಬಿದ್ದ ಕನಸಿನಲ್ಲಿ ನೀವು ಮತ್ತು ನಿಮ್ಮ ಸುತ್ತಮುತ್ತಲಿನವರೂ ಉರಿಬಿಸಿಲಿನಲ್ಲಿ ಯಾವುದೋ ಶ್ರಮದ ಕೆಲಸ ಮಾಡಿ ತಡೆಯಲಾರದ ಹಸಿವಿನಿಂದ ನರಳುವಂತಾಗಿ ನೀವು ಊಟ ಮಾಡುವಿರಿ ಮತ್ತು ಸುತ್ತಮುತ್ತಲಿನವರ ಮೇಲೂ ನಿಮಗೆ ದಯೆಯುಂಟಾಗಿ ನೀವು ಅವರಿಗೂ ಊಟ ಕೊಡುವಿರಿ. ಆದರೆ ಕನಸಿನಿಂದ ಎದ್ದಾಗ ಗೊತ್ತಾಗುತ್ತದೆ, ನೀವು ಹೊಟ್ಟೆ ತುಂಬ ಉಂಡೇ ಮಲಗಿದ್ದು, ಒಂದು ಕ್ಷಣ ಕೂಡಾ ಹಾಸಿಗೆಯಿಂದೆದ್ದು ಹೊರಗೆ ಹೋಗಿಲ್ಲ ಎಂದು. ಹಾಗೇ ಇದು ಕೂಡ.

ಹಾಗೆಂದ ಮಾತ್ರಕ್ಕೆ ನೀವು ಕನಸಿನಲ್ಲಿ ಕಷ್ಟ ನೋಡಿದಂತೆ ಎಂದು, ಅದೆಲ್ಲ ಹುಸಿ ಎಂದು ಸುಮ್ಮನಿರಬಹುದೆಂದು ಹೇಳುತ್ತಿಲ್ಲ. ಕನಸಿನ ಹಸಿವನ್ನು ಕನಸಿನ ಆಹಾರದಿಂದ ತಣಿಸಲೇಬೇಕು. ಆದರೆ ಒಂದು ಮಾತು: ಜಾಗೃತ ಮತ್ತು ಸ್ವಪ್ನಾವಸ್ಥೆಗಳನ್ನು ಪರಸ್ಪರ ಗೊಂದಲಗೊಳಿಸಿಕೊಳ್ಳಬಾರದು. ಹಾಗಾಗಿ ನಿಮಗೆ ಆತ್ಮ ಅಥವಾ ಸತ್ಯ ಸಾಕ್ಷಾತ್ಕಾರವಾಗಿ ಈ ಐಂದ್ರಿಯಿಕ ಜಗತ್ತಿನ ಭ್ರಾಂತಿಕಾರಕತೆಯಿಂದ ಜಾಗೃತರಾಗಿ ಏಳುವವರೆಗೆ ನೀವು ಎಲ್ಲೆಲ್ಲಿ ದುಃಖ ನೋಡುವಿರೋ ಅಲ್ಲೆಲ್ಲ ದುಃಖ ನಿವಾರಣೆಯ ಸಮಾಜ ಸೇವೆ ಮಾಡಬೇಕು. ಆದರೆ ಹಾಗೆ ಮಾಡುವಾಗ *ಅಹಂಕಾರ* ಇಲ್ಲದೆ ಅಂದರೆ 'ಅದನ್ನು ಮಾಡುತ್ತಿರುವುದು ನಾನು' ಎಂಬ ಭಾವವಿಲ್ಲದೆ ಮಾಡಬೇಕು! ನಿಮ್ಮಲ್ಲಿ 'ನಾನು ಭಗವಂತನ ಸಾಧನ' ಎಂಬ ಭಾವನೆ ಇರಬೇಕು. ಹಾಗೇ ನೀವು 'ನಾನು ನನಗಿಂತ ಕೆಳಗಿರುವವನಿಗೆ ಸಹಾಯ ಮಾಡುತ್ತಿದ್ದೇನೆ. ಆತನಿಗೆ ಸಹಾಯದ ಅಗತ್ಯವಿದೆ ಮತ್ತು ಅದನ್ನು ನಾನು ಒದಗಿಸುತ್ತಿದ್ದೇನೆ' ಎಂಬ ಆಲೋಚನೆಗೆ ನೀವು ಸಿಲುಕಿಕೊಳ್ಳದಂತೆ ಎಚ್ಚರ ವಹಿಸಬೇಕು. ಅವನಲ್ಲಿರುವ ದೇವರನ್ನು ಪೂಜಿಸುವ ಮಾರ್ಗವಿದು ಎಂಬ ಭಾವದಲ್ಲಿ ಸಹಾಯ ಮಾಡಬೇಕು. ಇಂತಹ ಸೇವೆಯೆಲ್ಲ ಆತ್ಮನ ಸೇವೆಯೇ ಹೊರತು ಬೇರೆಯಲ್ಲ. ಈ ಸೇವೆ ನಿಮಗಾಗಿಯೇ ಹೊರತು ಬೇರೆಯವರಿಗಲ್ಲ.

~~~~~~~~~~~
~~~~~~~~~~~

ಶ್ರೀ ರಮಣ ಮಹರ್ಷಿಗಳನ್ನು ಕುರಿತ ಕನ್ನಡದಲ್ಲಿನ ಕೆಲವು ಪುಸ್ತಕಗಳು

ಶ್ರೀ ರಮಣ ಮಹರ್ಷಿಗಳೊಡನೆ ಮಾತುಕತೆ ಮೂಲ: ಮುನಗಾಲ ಎಸ್. ವೆಂಕಟರಾಮಯ್ಯ ಕನ್ನಡಕ್ಕೆ: ಡಾ॥ ಎಸ್.ವೇಣುಗೋಪಾಲ ರಾವ್

ಅನುದಿನವೂ ಭಗವಾನರ ಸನ್ನಿಧಿಯಲ್ಲಿ ಮೂಲ: ಎ. ದೇವರಾಜ ಮೊದಲಿಯಾರ್ ಕನ್ನಡಕ್ಕೆ: ಎಸ್.ಕೆ. ಸ್ವಾಮಿ

ಶ್ರೀ ರಮಣ ಮಹರ್ಷಿ ಮತ್ತು ಆತ್ಮಜ್ಞಾನ ಮಾರ್ಗ ಮೂಲ:ಅರ್ಥರ್ ಓಸ್ಬರ್ನ್ ಕನ್ನಡಕ್ಕೆ: ಡಾ॥ ಎಂ ಡಿ. ನಾಯ್ಕ

ಮಹರ್ಷಿ ಪ್ರವಚನ(ಭಾಗಗಳು ೧, ೨) ಕನ್ನಡಕ್ಕೆ: ಶ್ರೀ ರಮಣ ಸೇವಾ ಸಮಿತಿ, ಬೆಂಗಳೂರು

ಭಗವಾನ್ ಶ್ರೀ ರಮಣ ಮಹರ್ಷಿಗಳ ವಚನಾಮೃತ(ನಾನು ಯಾರು: ವಿಚಾರ ಸಂಗ್ರಹ-ಉಪದೇಶ ಮಂಜರಿ)

ಭಗವಾನ್ ಶ್ರೀ ರಮಣ ಮಹರ್ಷಿಗಳ 'ಉಳ್ಳದು ನಾರ್ಪದು' ಕನ್ನಡಕ್ಕೆ : ಡಾ॥ ಕೆ.ಎ. ನಾರಾಯಣನ್

ಪ್ರಾಣ ಮಿತ್ರ ಭಗವಾನ್ ರಮಣರು ಸಂಕಲನ ಮತ್ತು ಭಾಷಾಂತರ: ಮುಕ್ತಾ ಮನು

ಭಗವಾನ್ ಶ್ರೀ ರಮಣ ಮಹರ್ಷಿ ಲೇ: ಎನ್. ರಾಮಚಂದ್ರ ರಾವ್

ಶ್ರೀ ಮಹರ್ಷಿ: ಸಚಿತ್ರ ಸಂಕ್ಷಿಪ್ತ ಜೀವನ ಚರಿತ್ರೆ

ಶ್ರೀ ರಮಣ ಗೀತಾ, **ಶ್ರೀ ರಮಣ ಉಚ್ಛಿಷ್ಟ, "ನಾನು ಯಾರು?"**

(ಈ ಎಲ್ಲ ಪುಸ್ತಕಗಳ ಪ್ರಕಾಶಕರು: **ಶ್ರೀ ರಮಣಾಶ್ರಮ, ತಿರುವಣ್ಣಾಮಲೈ, ತಮಿಳ್ನಾಡು**)

ರಮಣ ಮಹರ್ಷಿ ಮತ್ತು ಅವರ ಸಂದೇಶ ಮೂಲ: ಪಾಲ್ ಬಂಟ್ರಿನ್ ಕನ್ನಡಕ್ಕೆ: ಎ.ಎಸ್. ವೇಣುಗೋಪಾಲ ರಾವ್

ಭಗವಾನ್ ರಮಣರು ಮತ್ತು ಮಾತುಶ್ರೀ ಮೂಲ: ಎ.ಆರ್ ನಟರಾಜನ್ ಕನ್ನಡಕ್ಕೆ: ಡಾ॥ ಕೆ. ಶಿವರಾಮ ಕಾರಂತ

ರಮಣ ಮಹರ್ಷಿಗಳ ದೃಷ್ಟಾಂತ ಕಥೆಗಳು ಲೇ. ಬಿ.ಎಸ್. ಕೃಷ್ಣಮೂರ್ತಿ

ಶ್ರೀ ರಮಣಾಶ್ರಮದ ಪತ್ರಗಳು ಮೂಲ: ಸೂರಿ ನಾಗಮ್ಮ ಕನ್ನಡಕ್ಕೆ: ಡಾ॥ ಕೆ.ಎ. ನಾರಾಯಣನ್

ಶ್ರೀ ರಮಣ ಮಹರ್ಷಿಗಳ ಸತ್-ದರ್ಶನ(ವ್ಯಾಖ್ಯಾನ ಸಹಿತ)

(ಮೇಲಿನ ಐದೂ ಪುಸ್ತಕಗಳ ಪ್ರಕಾಶಕರು: **ರಮಣ ಮಹರ್ಷಿ ಸೆಂಟರ್ ಫಾರ್ ಲರ್ನಿಂಗ್,** ಬೆಂಗಳೂರು)

ಶ್ರೀ ರಮಣ ಮಹರ್ಷಿಗಳ ಜೀವನ ಚರಿತ್ರೆ ಲೇ: ಟಿ.ಎಸ್. ಅನಂತ ಮೂರ್ತಿ ಪ್ರ:ಲೇಖಕರು

ಶ್ರೀ ರಮಣ ವಚನವೇದ ಸಂಗ್ರಾಹಕರು: ಶ್ರೀ ಸ್ವಾಮಿ ಪ್ರಣವಾನಂದ ಪ್ರ: ರಮಣ ಸೇವಾ ಸಂಘ, ಕುಮಟಾ (ಉ.ಕ.)

ರಮಣ ಮಹರ್ಷಿ ಮೂಲ: ಕೆ. ಸ್ವಾಮಿನಾಥನ್ ಕನ್ನಡಕ್ಕೆ:ಎನ್ ಬಾಲಸುಬ್ರಮಣ್ಯ ಪ್ರ: ನ್ಯಾಷನಲ್ ಬುಕ್ ಟ್ರಸ್ಟ್, ನವದೆಹಲಿ



“ ಆತ್ಮವಿಚಾರ ಮಾಡದಿದ್ದಲ್ಲಿ ಲೋಕ ವಿಚಾರ ನುಸುಳುವುದು. ನಿಜವಾಗಿ ಇರುವುದನ್ನು ಬಿಟ್ಟು ನಿಜವಾಗಿ ಇಲ್ಲದ್ದನ್ನು ಅರಸತೊಡಗಿದಾಗ ಅಶಾಂತಿ ಆರಂಭವಾಗುತ್ತದೆ. ಯಾವುದು ನಿಜವಾಗಿ ಇರುವುದೋ ಅದನ್ನು ಕಂಡಾಗ, ಆ ಕಾಣುವಿಕೆಯಲ್ಲಿ ನೀವು ಶಾಂತಿ ಪಡೆಯುವಿರಿ.

ಸಂತೋಷ ದುಃಖಗಳೆಂಬುವು ಅಹಂಕಾರದ ಸ್ವಭಾವಗಳು. ಆತ್ಮವಿಚಾರದ ಮೂಲಕ ನೀವು ನಿಜವಾಗಿ ಆ ಅಹಂಕಾರವಲ್ಲ ಎಂಬ ಅರಿವು ಉಂಟಾದಾಗ ನಿಮಗೆ ಬಂದು ಹೋಗಿ ಕಾಡುವ ಸಂತೋಷವಾಗಲಿ ದುಃಖವಾಗಲಿ ಎಲ್ಲಿರುತ್ತದೆ? ನಿಮ್ಮ ನಿಜ ಸ್ವರೂಪ ಈ ಎಲ್ಲ ಭಾವಗಳ ಆಚೆಯದು. ಆತ್ಮ ವಿಚಾರದ ಲಾಭ ನಿಮ್ಮ ಅರಿವಿಗೆ ಬರುವುದು ಬದುಕಿನ ಎಲ್ಲ ಕಷ್ಟ ದುಃಖಗಳಿಂದ ಬಿಡುಗಡೆ ಪಡೆಯುವ ರೂಪದಲ್ಲಿ. ನಿಮಗೆ ಇದಕ್ಕಿಂತ ಹೆಚ್ಚಿಗೆ ಇನ್ನೇನು ಬೇಕು?

ಆತ್ಮದ ಅರಿವಿನಲ್ಲಿರುವವನಿಗೆ ಮಾಡಬೇಕಾದದ್ದು ಏನೂ ಉಳಿದಿರುವುದಿಲ್ಲ, ಯಾವ ಆಲೋಚನೆಗಳೂ ಇರುವುದಿಲ್ಲ. ಆಗ ಅನಂತಶಕ್ತಿಯು ಅವನಿಗೆ ಅಗತ್ಯವೆನಿಸುವ ಎಲ್ಲ ಕೆಲಸಗಳನ್ನೂ ತಾನೇ ಮಾಡುತ್ತಾ ಹೋಗುತ್ತದೆ. ಶಾಂತಿ ಎಂಬುದು ಮನುಷ್ಯನ ಆಂತರಿಕ ಸ್ವಭಾವ. ಅದನ್ನು ನೀವು ನಿಮ್ಮೊಳಗೆ ಕಾಣತೊಡಗಿದರೆ ಅದನ್ನು ನೀವು ಎಲ್ಲದರಲ್ಲಿಯೂ ಕಾಣತೊಡಗುವಿರಿ.

ತಾತ್ಕಾಲಿಕ ಅಧ್ಯಾತ್ಮಿಕ ಅನುಭವಗಳಲ್ಲಿ ಕಾಣಿಸಿಕೊಳ್ಳುವ ಶಾಂತಿ ನಿಮ್ಮೊಳಗೇ ಇದ್ದುದು. ಅದು ನಿಮ್ಮ ಮೇಲೆ ಹೊರಗಿಂದ ತಂದು ಹೊರಿಸಿದುದಲ್ಲ. ಆತ್ಮಾನುಭವ ಅಥವಾ ಆತ್ಮಸಾಕ್ಷಾತ್ಕಾರವಾದಾಗ ಅದಕ್ಕಾಗಿ ಪಟ್ಟ ಪ್ರಯತ್ನಗಳ ಬಗ್ಗೆ ನಾವೇ ನಗುವ ದಿನ ಬರುತ್ತದೆ. ಏಕೆಂದರೆ ಅದಕ್ಕೆ ಮೊದಲು ಮತ್ತು ಆ ನಂತರ ನಾವೇನಾಗಿದ್ದೆವೋ ಅದು ಒಂದೇ ಎಂದು ನಮಗೆ ಗೊತ್ತಾಗುತ್ತದೆ.”

ಗಾಂಧಿಗಿರಿ ಪ್ರಕಾಶನ
ಎಚ್.ಐ.ಜಿ.-೫, 'ನುಡಿ', ಕಲ್ಲಹಳ್ಳಿ ಬಡಾವಣೆ
ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ಬೆಲೆ ರೂ. ೩೦/-